Communist party member B. Murigaiah of Davangere had given orders to print pamblets to 'Om' Printing Press, Davangere, to print pamphlets of his own under the heading of " ಶಕ್ತಿ ಸರಣಿಯಂಬಿಲಂಟ್ಸ್ ಪ್ರೆಸ್ ದಾವಣಗೆರೆ " etc. but the matter was not published by the printers and stopped by printing a few unfinished and incomplete pamphlets which were not at all distributed among the public. Copies of these incomplete pamphlets are enclosed for kind perusal.

Sd/- V.O. Narasimhiah,
Sub Inspector of Police,

13-8-1947.

=======

Submitted to the Deputy Commissioner, Chitaldrug District.

Sd/- B. Hanumanthiah,

13-8-47. Inspector.

=====

" C o n y "

G. N. Pallegar

Deputy Commissioner,
Chitaldrug District.

mns.

॥ ವಂದೇ ಮಾತರಂ ॥

ದಿನಾಂಕ ೧೫—೮—೪೭ ರಲ್ಲಿ ಭಾರತಾಮ್ಯಂತ ನಡೆಯಿಸುವ **ಸ್ವಾತಂತ್ರೋತ್ಸವ** ದಿನಾಚರಣೆಯನ್ನು ಹಳೇಪೇಟೆ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ದೇಶಪ್ರೇಮಿಗಳು ಬಹು ವೈಭವದಿಂದ ನಡೆಸುತ್ತಾರಾವ ಕಾರಣ ಸ್ವದೇಶ ಪ್ರೇಮಿಗಳು ಉತ್ಸವದಲ್ಲಿ ಭಾಗವಹಿಸಿ ಭಾರತಾಂಬೆಯ ಪ್ರೀತಿಗೆ ಪಾತ್ರರಾಗಬೇಕಾಗಿ ಪ್ರಾರ್ಥನೆ.

ವ್ಯವಸ್ಥಾಪಕರು

ಜಾಲಿಮರದ ವಿರುಪಾಕ್ಷಪ್ಪ.

ಸಂಚಾಲಕರು:

T.N.R. ಪಕ್ಕೀರಪ್ಪ.

M. ಶಿದ್ದರಾಮೇಶ್ವರ.

ಮತ್ತು ಗೆಳೆಯರು

ಗೌ॥ ಕಾರ್ಯದರ್ಶಿಗಳು

ವೇ॥ಮೂ॥ ಕೆಂಡಪ್ಪಯ್ಯ.

ಹೋಲೂರು ನಾಗಪ್ಪ.

ಕುದುರೆ ಗುರುಪಾದಪ್ಪ.

ಬುಸ್ಸೂರು *G.* ಕೊಟ್ರಪ್ಪ.

ಹಳೇಪೇಟೆ

ದಾವಣಗೆರೆ.

೧೫—೮—೪೭

ಕಾರ್ಯಕ್ರಮಗಳು

ದಿನಾಂಕ ೧೪-೮-೪೭ ನೇ ಗುರುವಾರ ರಾತ್ರಿ ೧೦ ಘಂಟೆಗೆ ಧ್ವಜಾರೋಹಣ, ಪೂಜಾ, ಸಂಗೀತ.

೧೫-೮-೪೭ ನೇ ಶುಕ್ರವಾರ ಪ್ರಾತಃಕಾಲ ೬ ರಿಂದ ೯ ರವರೆಗೆ ಧ್ವಜಾರೋಹಣ, ಪ್ರಭಾತ್‌ಫೇರಿ.

ಸಾಯಂಕಾಲ ೬ ಘಂಟೆಗೆ ದೀಪೋತ್ಸವ, ಪೂಜೆ, ೮ ರಿಂದ ೯ ರವರೆಗೆ B. R. ಕುಮಾರಿ ನಾಗರತ್ನ ಇವರಿಂದ ತ್ಯಾಗರಾಜ ಕೀರ್ತನೆಗಳು ಮತ್ತು ಪ್ರಸಾದ ವಿನಿಯೋಗ.

ಸ್ವಾತಂತ್ರ್ಯೋತ್ಸವದ ಕರೆಯೋಲೆ.

ಮಾನ್ಯರಾಗಿ _____

_____

॥ ವಂದೇ ಮಾತರಂ ॥

ಮಹಾಶಯರೇ,

ತಾರೀಖು 15—8—47 ನೇ ದಿನ

'ಸ್ವಾತಂತ್ರ್ಯ ವಿಜಯೋತ್ಸವ'ವನ್ನು ವೈಭವಯುಕ್ತವಾಗಿ ನೆರವೇರಿಸಲು ನಿರ್ಧರಿಸಿ,

ಈ ಬಗ್ಗೆ ನಾನಾ ಕಾರ್ಯಕ್ರಮಗಳನ್ನು ಕೈಗೊಂಡು ಈ ವಿಷಯದಲ್ಲಿ ಈಗಾಗಲೇ ಪ್ರಕಟನೆಗಳ ಮೂಲಕ ಪ್ರಸಿದ್ಧಪಡಿಸಿರುವದು ಸರಿಯಷ್ಟೆ ?

ಇತ್ತೀಚೆಗೆ ಈ ವಿಜಯೋತ್ಸವದ ಸಂತೋಷ ಸಂದರ್ಭದಲ್ಲಿ

ಬಡಜನರಿಗೆ ಅನ್ನಹಾಕಬೇಕಾಗಿ

ಕೆಲ ಜನರು ಯೋಗ್ಯ ಸಲಹೆಯನ್ನು ಕೊಟ್ಟಿರುತ್ತಾರೆ.

ಆದರೆ ರೇಷ್ಮ, ಸರ್ಕಾರದ ನಿರ್ಬಂಧ, ಕಾಳಸಂತೆಯ ತುಟಾಗ್ರತೆ ಇವುಗಳ ದೆಸೆಯಿಂದ ಕಾಲಕ್ಕೆ ಸರಿಯಾಗಿ ಧಾನ್ಯವನ್ನು ಸಂಗ್ರಹಿಸುವುದು ಬಹಳ ಕಷ್ಟವಾಗಿದೆ. ಆದ್ದರಿಂದ ಪುಣ್ಯಾತ್ಮರಾದವರು ತಂತಮ್ಮ ಫುಡ್ ರೇಷನ್ನಿನಲ್ಲಿ ಒಂದು ಸೇರು ಅಕ್ಕಿ ಅಥವಾ ಒಂದು ಸೇರು ಜೋಳವನ್ನು ಆದಷ್ಟು ತೀವ್ರವಾಗಿ ಚಾಮರಾಜಪೇಟೆ ಟ್ಯೂ ಹಾಲ್ ರೋಡ್ ಚೌಕದಲ್ಲಿರುವ

ನಗರ ಕಾಂಗ್ರೆಸ್ ಆಫೀಸಿಗೆ

(ಧಾನ್ಯವನ್ನು ತೆಗೆದುಕೊಳ್ಳುವ ವ್ಯವಸ್ಥೆಯಾಗಿದೆ.) ಮುಟ್ಟಿಸಬೇಕಾಗಿ ಪ್ರಾರ್ಥನೆ.

ತಾ. 16-8-47 ನೇ ಶನಿವಾರ ಬೆಳಿಗ್ಗೆ 10 ಗಂಟೆಗೆ ಧರ್ಮಪ್ರವರ್ತ

ರಾಜನಹಳ್ಳಿ ಹನುಮಂತಪ್ಪನವರ ಛತ್ರದ ಆವರಣದಲ್ಲಿ

ಬಡಜನರ ಊಟಕ್ಕೆ ವ್ಯವಸ್ಥೆ ಮಾಡಲಾಗಿದೆ.

ದಾವಣಗೆರೆ
11-8-47

॥ ಜೈ ಹಿಂದ್ ॥

ನಗರ ಕಾಂಗ್ರೆಸ್ ಸಮಿತಿ
ಸದಸ್ಯರು.

ನೇತಾಜಿ ಪ್ರೆಸ್, ದಾವಣಗೆರೆ.

॥ ವಂದೇ ಮಾತರಂ ॥

ಸ್ವಾತಂತ್ರೋತ್ಸವದ ಕಾರ್ಯಕ್ರಮದ ಹೊಸ ಪ್ರಕಟನೆ

1) ತಾ. 14-8-1947ನೇ ಗುರುವಾರ ರಾತ್ರಿ 12 ಘಂ. 1 ನಿಮಿಷಕ್ಕೆ-
ಕಾಂಗ್ರೆಸ್ ಆಫೀಸಿನಲ್ಲಿ ಹೊಸ ರಾಷ್ಟ್ರ ಧ್ವಜವನ್ನು ಹಾರಿಸುವುದು.

2) 15 ನೇ ತಾರೀಖಿನ ಶುಕ್ರವಾರ ಬೆಳಿಗ್ಗೆ ಜಾವ-
ಕಾಂಗ್ರೆಸ್ ಆಫೀಸಿನಿಂದ ಊರಿನಲ್ಲಿ ಪ್ರಭಾತ್‌ಫೇರಿ ಹೊರಡುವುದು.

3) 15 ನೇ ತಾರೀಖು ಬೆಳಿಗ್ಗೆ 9 ಘಂಟೆಗೆ-
ಗಾಂಧಿ ಮೈದಾನದಲ್ಲಿ ರಾಷ್ಟ್ರ ಧ್ವಜಾರೋಹಣ

4) ಅದೇ ದಿನದ ಮಧ್ಯಾಹ್ನ 4 ಘಂಟೆಯಿಂದ-
ಪುಷ್ಪ ಮಂಟಪದಲ್ಲಿ ಭಾರತಮಾತೆಯ ಭಾವಚಿತ್ರವನ್ನು ಅಲಂಕರಿಸಿ ಕಾಂಗ್ರೆಸ್ ಆಫೀಸಿನಿಂದ ಊರಲ್ಲೆಲ್ಲಾ ಮೆರವಣಿಗೆ ಹೊರಡುವುದು.

5) ಅದೇ ದಿನದ ಸಾಯಂಕಾಲ 5-30 ಕ್ಕೆ-
ಗಾಂಧಿ ಮೈದಾನದಲ್ಲಿ ಬಹಿರಂಗ ಸಭೆ. ಈ ಸಭಾಧ್ಯಕ್ಷತೆಯನ್ನು ವಹಿಸಲು ಮೈಸೂರಿನ ಸುಪ್ರಸಿದ್ಧ ಕಾಂಗ್ರೆಸ್ ಮುಂದಾಳುಗಳಾದ ಶ್ರೀಮಾನ್ ಜೆಜ್. ಶಿದ್ದಯ್ಯನವರು ದಯಮಾಡಿಸುತ್ತಾರೆ. ಮತ್ತು ಇತರೆ ಮೇರಪಕ್ಕರ ಭಾಷಣಗಳು ಆ ಕಾಲದಲ್ಲಿ ನಡೆಯಕ್ಕಿದ್ದಿರುತ್ತವೆ.

6) ಅದೇ ದಿನದ ಸಾಯಂಕಾಲ 7 ಘಂಟೆಗೆ-
ಧ್ವಜಾ ಅವರೋಹಣ.

7) 16ನೇ ತಾ. ಬೆಳಿಗ್ಗೆ 10ಘಂ. ಯಿಂದ ಮಧ್ಯಾಹ್ನ 1 ಘಂ. ವರೆಗೆ-
ಧರ್ಮಪ್ರವರ್ತ ರಾಜನಹಳ್ಳಿ ಹನುಮಂತಪ್ಪನವರ ಛತ್ರದಲ್ಲಿ ಬಡ ಬಗ್ಗರಿಗೆ ಅನ್ನಸಂತರ್ಪಣೆ.

8) ಅದೇ ದಿನದ ಸಾಯಂಕಾಲ 5 ಘಂ. ಯಿಂದ 7 ಘಂ. ವರೆಗೆ-
ಗಾಂಧಿ ಮೈದಾನದಲ್ಲಿ ದಾವಣಗೆರೆ ನಗರದ ಪ್ರಸಿದ್ಧ ಪೈಲ್ವಾನರ ಬಹಿರಂಗ ಕುಸ್ತಿ ಪ್ರದರ್ಶನ.

ಮೇಲ್ಕಂಡ ಕಾರ್ಯಕ್ರಮಗಳಲ್ಲಿ ಸರ್ವರೂ ಹೃತ್ಪೂರ್ವಕವಾಗಿ ಭಾಗವಹಿಸಿ ಈ ಸ್ವಾತಂತ್ರೋತ್ಸವವನ್ನು ಜರಸ್ಪಿಗೊಳಿಸಬೇಕಾಗಿ ವಿನಂತಿ.

ಜೈ ಹಿಂದ್

ತಾ. 12-8-47. **ನಗರ ಕಾಂಗ್ರೆಸ್ ಸಮಿತಿ.**

ನೇತಾಜಿ ಪ್ರೆಸ್ ದಾವಣಗೆರೆ.

ದಾವಣಗೆರೆ ಪೌರಸಭಾ ಪ್ರಸಿದ್ಧಪತ್ರಿಕೆ.

೧೯೪೭ ನೇ ಇಸ್ವಿ ಆಗಸ್ಟ್ ೧೫ ನೇ ತಾರೀಖು ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯವಾದ ದಿನ. ಒಂದುನೂರಾ ಐವತ್ತು ವರ್ಷಗಳಕಾಲ ನಮ್ಮಗಳಿಗೆ ಬಿಗಿಯಲ್ಪಟ್ಟಿದ್ದ ದಾಸ್ಯತೃಂಖಲೆಗಳು ಅಂದು ಕಳಚಿಹೋಗಿ ನಾವು ಬಂಧಮುಕ್ತರಾಗುತ್ತೇವೆ. ಆಳುವವರು ಆಳಿಸಿಕೊಳ್ಳುವವರು ಎಂಬ ಭೇದ ಅಳಿಸಿಹೋಗುತ್ತದೆ. ಉಚ್ಚ ನೀಚ, ಬಡವ ಬಲ್ಲಿದ ಎಂಬ ದ್ವಂದ್ವಗಳಿಗೆಡೆಯಿಲ್ಲದಂತಾಗಿ ಪ್ರತಿಯೊಬ್ಬ ಭಾರತೀಯನೂ ತಲೆ ಎತ್ತಿ ತಿರುಗಾಡುವಂತಾಗುತ್ತದೆ. ಇಂತಹ ಶುಭ ದಿವಸವನ್ನು ಯಾವ ರೀತಿ ಆಚರಿಸಬೇಕೆಂಬ ವಿಷಯದಲ್ಲಿ ಪೌರಸಭಾ ಸದಸ್ಯರು ಸಭೆ ಸೇರಿ ಮಾಡಿದ ತೀರ್ಮಾನ ಅನುಸರಿಸಿ ಈ ಕೆಳಗೆ ಕಂಡಂತೆ ಕಾರ್ಯಕ್ರಮ ಕೈಕೊಳ್ಳಬೇಕೆಂದು ನಿರ್ಧರಿಸಲಾಗಿದೆ. ದಾವಣಗೆರೆ ಮಹಾ ಜನಗಳು ಈ ಕಾರ್ಯದಲ್ಲಿ ಸಹಕರಿಸಿ ಈ ಮಹೋತ್ಸವವು ಯಶಸ್ವಿಯಾಗುವಂತೆ ಮಾಡಬೇಕಾಗಿ ಪ್ರಾರ್ಥನೆ.

ಕಾರ್ಯಕ್ರಮ

೧. **ತಾ॥ ೧೫-೮-೪೭ ನೇ ಶುಕ್ರವಾರ** ಪ್ರತಿಯೊಬ್ಬರೂ ತಮ್ಮತಮ್ಮ ಮನೆ, ಅಂಗಡಿ ಮತ್ತು ಬೀದಿಗಳನ್ನು ತಳಿರು ತೋರಣಗಳಿಂದ ಅಲಂಕರಿಸಿ ಆನಂದದಾಯಕವಾದ ದಿನವೆಂದು ಆಚರಿಸಬೇಕಾಗಿ ಸೂಚಿಸಿದೆ.

೨. ಪ್ರತಿಯೊಂದು ದೇವಸ್ಥಾನ, ಮಸೀದಿ ಮತ್ತು ಚರ್ಚುಗಳಲ್ಲಿಯೂ ಅಳುವ ಮಹಾಸ್ವಾಮಿಯವರಿಗೆ ದೀರ್ಘಾಯುಷ್ಸು ಉಂಟಾಗಲೆಂದೂ, ಅವರ ಪ್ರಜಾವಾತ್ಸಲ್ಯಪೂರ್ವಕವಾದ ರಾಜ್ಯಭಾರವು ಚಿರಕಾಲ ಬಾಳಲೆಂದೂ ಮತ್ತು ಹೊಸದಾಗಿ ಸ್ವಾತಂತ್ರ್ಯಗಳಿಸಲಿರುವ ಭಾರತ ಸಂಯುಕ್ತ ಸಂಸ್ಥಾನದಲ್ಲಿ ಸುಖ, ಶಾಂತಿಗಳು ನೆಲಸಲೆಂದೂ, ಈ ಸಂಯುಕ್ತ ಸಂಸ್ಥಾನಕ್ಕೆ ವಿಶ್ವ ಸ್ವತಂತ್ರ ರಾಷ್ಟ್ರಗಳ ಶ್ರೇಣಿಯಲ್ಲಿ ಉನ್ನತವೂ ಮತ್ತು ಭವ್ಯವೂ ಆದ ಸ್ಥಾನ ದೊರೆಯಲೆಂದೂ ಆ ದಿವಸ ವಿಶೇಷ ಪ್ರಾರ್ಥನೆಯನ್ನು ಸಲ್ಲಿಸತಕ್ಕದ್ದು. ಪೂಜಾ ವಿನಿಯೋಗಕ್ಕಾಗಿ ಮ್ಯುನಿಸಿಪಲ್ ಫಂಡ್ಸಿನಿಂದ ಪ್ರತಿಯೊಂದು ಸಂಸ್ಥೆಗೂ ೨ ರೂಪಾಯಿನಂತೆ ಕೊಡಲಾಗುವುದು.

೩. ಮೈಸೂರು ಮತ್ತು ರಾಷ್ಟ್ರೀಯ ಧ್ವಜಗಳನ್ನು ಏಕಕಾಲದಲ್ಲಿ ಆ ದಿವಸ ಪ್ರಾತಃಕಾಲ ೯ ಘಂಟೆಗೆ ಮುನ್ಸಿಪಲ್ ಆಫೀಸ್ ಮೈದಾನದಲ್ಲಿ ಹಾರಿಸಲಾಗುವುದು. ಅದೇ ೮-೩೦ ಘಂಟೆಯಿಂದ ಮೈಸೂರು ಮತ್ತು ರಾಷ್ಟ್ರೀಯ ಧ್ವಜಗಳೊಡನೆ ಬ್ಯಾಂಡ್ ಮತ್ತು ಇತರೆ ಮಂಗಳವಾದ್ಯಗಳ ಸಹಿತ ಊರಲ್ಲೆಲ್ಲಾ ಉತ್ಸವ ಸ್ಪೋಟು ಟೌನ್‌ಹಾಲ್ ಬಳಿ ಪರಿಸಮಾಪ್ತಿಗೊಳ್ಳುವುದು. ಭಜನಾ ಮಂಡಲಿಗಳೂ ಸಹ ಈ ಉತ್ಸವದಲ್ಲಿ ಭಾಗಿಗಳಾಗಬಹುದು. ಆ ಕಾಲಕ್ಕೆ ಅಲ್ಲಿ ನೆರೆದ ಜನಗಳನ್ನು ಉದ್ದೇಶಿಸಿ ಆ ಉತ್ಸವದ ಮಹತ್ವವನ್ನು ಕುರಿತು, ಅಧ್ಯಕ್ಷರಿಂದ ಚುನಾಯಿಸಲ್ಪಡುವ ಸುಮಾರು ನಾಲ್ಕು ಜನಗಳಿಂದ ಭಾಷಣಗಳಾಗುವುವು.

೪. ಆ ದಿವಸ ಸಾಯಂಕಾಲ ೪ ಘಂಟೆಗೆ ಪೌರಸಭಾ ನೌಕರರುಗಳಿಗೆಲ್ಲಾ ಪುರಭವನದ ಬಳಿ ಭೋಜನ ಸಮಾರಂಭವನ್ನು ಏರ್ಪಡಿಸಲಾಗಿದೆ.

೫ ದಾವಣಗೆರೆ ಮಹಾಜನಗಳು ತಮ್ಮ ಆನಂದೋತ್ಸವದ್ಯೋತಕವಾಗಿ ರಾತ್ರಿ ದೀಪಾಲಂಕಾರಮಾಡಿ ಮದ್ದು ಮಸಿ ಸುಡಬಹುದು.

ಈ ಉತ್ಸವವು ಯಶಸ್ವಿಯಾಗಿ ನಡೆಯಲು ಅನುಕೂಲವಾಗುವಂತೆ ಸಾರ್ವಜನಿಕ ಸಭೆ ಮತ್ತು ಉತ್ಸವಗಳ ಮೇಲೆ ಹಾಕಿರುವ ನಿಷೇಧಾಜ್ಞೆಗಳನ್ನು ವಜಾ ಮಾಡಬೇಕಾಗಿ ಚಿತ್ರದುರ್ಗ ಜಿಲ್ಲಾ ಡೆಪ್ಯುಟಿ ಕಮೀಷನರನ್ನು ಪ್ರಾರ್ಥಿಸಲಾಗಿದೆ. ಇದು ಅಲ್ಲದೆ ಹೆಂಡ ಸಾರಾಯಿ ವಗೈರೆ ಮಾದಕ ಪದಾರ್ಥಗಳ ಮಾರಾಟವನ್ನು ಆ ದಿವಸ ನಿಲ್ಲಿಸುವಂತೆ ಅಪ್ಪಣೆ ಮಾಡಬೇಕಾಗಿ ಅವರನ್ನು ಕೋರಲಾಗಿದೆ.

ಆ ದಿವಸವನ್ನು ಹೆಬ್ಬವನ್ನಾಗಿ ಆಚರಿಸಲು ಇಷ್ಟಪಡುವವರಿಗೆ ಬೇಕಾದ ಸಕ್ಕರೆ ವಗೈರೆ ಪದಾರ್ಥಗಳನ್ನು ಉದಾರತನದಿಂದ ಸರಬರಾಯಿ ಮಾಡುವಂತೆ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿಕೊಳ್ಳಲಾಗಿದೆ.

ದಾವಣಗೆರೆ
೧೧—೮—೧೯೪೭.

ಹೆಚ್. ಕೊಟ್ಟೂರುಬಸವಪ್ಪ
ಅಧ್ಯಕ್ಷ
ದಾವಣಗೆರೆ ಪೌರಸಭೆ.

ಶ್ರೀ ಜಯದೇವ ಪ್ರೆಸ್, ದಾವಣಗೆರೆ.

ಆಗಸ್ಟ್ ೧೫ ರ ದಿನ—

ಹಿಂದೀ ರಾಷ್ಟ್ರಧ್ವಜ ಹಾರಾಡಲಿ ★

ನಿರಂಕುಶಪ್ರಭುತ್ವದ ನಿರ್ನಾಮಕ್ಕಾಗಿ !

ಜವಾಬ್ದಾರೀ ಸರ್ಕಾರಕ್ಕಾಗಿ !!

ವೀರ ಪ್ರತಿಜ್ಞೆ ಮಾಡೋಣ !!!

ಬಂಧು ಭಗಿನಿಯರೇ,

ಆಗಸ್ಟ್ ೧೫, ಶತಮಾನಗಳ ಶೃಂಖಲೆಗಳನ್ನು ಕಿತ್ತೊಗೆದು ಭಾರತವರ್ಷದ ಹೊಸ ಶಕೆ ಪ್ರಾರಂಭವಾಗುವ ದಿನ.

ಆಗಸ್ಟ್ ೧೫, ಶತಮಾನಗಳ ಕಾಲದಿಂದ ಯೂನಿಯನ್ ಜಾಕ್ ಹಾರಾಡುತ್ತಿದ್ದ ಸ್ಥಳದಲ್ಲಿ ರಾಷ್ಟ್ರಧ್ವಜ ಹಾರಾಡುವ ದಿನ.

ಒಂದರಮೇಲೊಂದು ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಪ್ರಾಣಾಂತಿಕ ಪೆಟ್ಟು ಕೊಡುತ್ತಾ ಬಂದಿದ್ದ ಈ ನರೆಗಿನ ರಾಷ್ಟ್ರೀಯ ಹೋರಾಟ, ೧೯೪೬ ರ ಕ್ರಾಂತಿಕಾರೀ ಘಟನೆಗಳು, ಎಂದೂ ಕಂಡೂ ಕೇಳಿರದಂತಹ ಕೂಲಿಗಾರರ ರಾಜಕೀಯ ಮುಷ್ಕರಗಳು, ನಾವಿಕರ ಬಂಡಾಯ, ಪೋಲಿಸರ ಸಂಪು, ಹಸಿದ ಶೈತರ ದಾಂಡು, ಆಜಾದ್‌ಹಿಂದ್ ಸೈನಿಕರ ಬಿಡುಗಡೆಗಾಗಿ ನಡೆಸಿದ ಮಹಾ ಪ್ರದರ್ಶನ, ಹೀಗೆ ಸಶಸ್ತ್ರ ಮಿಲ್ಟ್ರಿಯವರೂ ಪೋಲಿಸರೂ ಬಂಡಾಯವೇಳುವುದು ಒಂದೆಡೆ ನಡೆಯುತ್ತಿದ್ದಾಗಲೇ ಕೂಲಿಗಾರ ವರ್ಗದ ಹೋರಾಟ ಇನ್ನೊಂದೆಡೆ ಹೆಚ್ಚುತ್ತಲೇ ಇತ್ತು. ಇನ್ನೊಂದೆಡೆ ಪ್ರಪಂಚದ ಪ್ರಜಾಪ್ರಭುತ್ವಶಕ್ತಿಯ ವತ್ತಾಯ ಇವೆಲ್ಲದರ ಫಲವಾಗಿ ಸಾಮ್ರಾಜ್ಯಶಾಹಿ ಹಿಂದಿನ ರೀತಿಯಲ್ಲೇ ಇನ್ನು ಮುಂದೆ, ಆಳಾವುದು ಸಾಧ್ಯವಿಲ್ಲವೆಂದು ಮನಗಂಡಿದೆ. ಅದರ ಫಲವಾಗಿ ಆಗಸ್ಟ್ ೧೫ ರ ಅಧಿಕಾರ ತ್ಯಾಗ.

ಸ್ವಾತಂತ್ರ್ಯದ ಹಾದಿಯಲ್ಲಿ ನಾವು ಮುಂದೆ ಸಾಗುತ್ತಿದ್ದೇವೆ. ಆದರೆ ಗುರಿ ಇನ್ನೂ ಸಮೀಪಿಸಿಲ್ಲ. ಹೊರಟುಹೋಗುವ ವಾಗ್ದಾನವನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿ ಹಿಂದೀಯ ಶಕ್ತಿಗೆ ಹೆದರಿ ಕೊಡಬೇಕಾಯಿತು. ಆದರೆ ಮಿಲಿಟರಿ ಮತ್ತು ಆರ್ಥಿಕ ನಿಯಂತ್ರಣಗಳನ್ನು ಹೊಸ ತೆರೆಯ ಹಿಂದೆ ಹೊಸ ಮತ್ತು ಹಳೆಯ ಮಿತ್ರರ ಮೂಲಕ ಇರಿಸಿಕೊಳ್ಳಲು ಸಾಮ್ರಾಜ್ಯಶಾಹಿ ಜಡಪಡಿಸುತ್ತಿದೆ.

ಸಾಮ್ರಾಜ್ಯವಾದಿಗಳು ದೇಶವನ್ನು ವಿಭಜಿಸಿ ಎರಡು ವಸಾಹತುಗಳ ನಡುವೆ ಕಲಹದ ವಿಷಬೀಜವನ್ನು ಬಿತ್ತಿದ್ದಾರೆ. ಇಬ್ಬರೊಳಗಿನ ಜಗಳವನ್ನು ಹೆಚ್ಚಿಸಿ ಅದರ ಪರಿಹಾರ ಮಾರ್ಗವಾಗಿ ಇಬ್ಬರೂ ತಮ್ಮ ಸಾಮ್ರಾಜ್ಯದೊಳಗೆ ಉಳಿಯುವಂತೆ ಮಾಡುವುದು ಅವರ ಉದ್ದೇಶ.

ಈ ಸಾಮ್ರಾಜ್ಯಶಾಹಿಯ ಕುಟಿಲ ಕಾರಸ್ಥಾನವನ್ನು, ಮೌಂಟ್ ಬ್ಯಾಟನ್ನರ ಮಹಾತಂತ್ರವನ್ನು ಮಣ್ಣುಗೂಡಿಸಬಹುದು. ಎರಡು ಜನಪ್ರಿಯ ಸರಕಾರಗಳು. ಎರಡು ಘಟನಾಸಮಿತಿಗಳೆಂದರೆ, ರಾಷ್ಟ್ರೀಯ ಮುಖಂಡತ್ವದ ಕೈಯಲ್ಲಿರುವ ಪ್ರಬಲ ಅಸ್ತ್ರಗಳು. ರಾಷ್ಟ್ರದ ಹಿತಸಾಧನೆಗಾಗಿ, ಗುರಿ ಮತ್ತು ಉದ್ದೇಶ ಸಾಧಿಸುವುದಕ್ಕಾಗಿ ಸರಿಯಾದ ರೀತಿಯಲ್ಲಿ ಉಪಯೋಗ ಮಾಡುವುದು ಮಾತ್ರ ಅತಿ ಅಗತ್ಯ.

ಆಗಸ್ಟ್ ೧೫ ರ ದಿನ ವೈಸ್ರಾಯರು ಕಾಂಗ್ರೆಸ್ ಮುಖಂಡರಿಗೆ ಅಧಿಕಾರ ಒಪ್ಪಿಸುವರು. ಆ ದಿವಸ ಹಿಂದೀಯ ಜನತೆಯ ಹೋರಾಟದ ಇತಿಹಾಸವಲ್ಲಿ ಒಂದು ಮಹತ್ವದ ಮೈಲುಗಲ್ಲಾಗುವುದು. ರಾಷ್ಟ್ರೀಯ ಹೋರಾಟದ ಕಳೆದ ಮೂವತ್ತು ವರ್ಷಗಳಲ್ಲಿ ಅಸಂಖ್ಯ ವೀರರು ಪ್ರಾಣತೆತ್ತ ಫಲವಾಗಿ ಈ ದಿನವನ್ನು ಕಾಣುವುದು ಶಕ್ಯವಾಗಿದೆ. ಆ ಹುತಾತ್ಮರನ್ನು ನಾವು ಸ್ಮರಿಸುವೆವು.

ಸಂಸ್ಥಾನಿ ನರಕದಲ್ಲಿ

ಆದರೆ ನಮ್ಮ ಸೋದರರಾದ ಬ್ರಿಟಿಷ್ ಇಂಡಿಯಾದ ಜನತೆ ಸ್ವಾತಂತ್ರ್ಯದಿಂದ ಉಸಿರಾಡುತ್ತಿರುವ ಪವಿತ್ರದಿನವಾದ ಆಗಸ್ಟ್ ೧೫ ರಂದು ಸಂಸ್ಥಾನಿ ನರಕದಲ್ಲಿ ಬಿದ್ದು ಹೊರಳಾಡುವ ನಾವು ಆನಂದಪಡುತ್ತೇವೆ. ಅಲ್ಲದೆ ನಮ್ಮ ಪ್ರೇಮದ ಆದರದ, ಕ್ರಾಂತಿಕಾರಕ ಕೆಂಪು ವಂದನೆಗಳನ್ನರ್ಪಿಸುತ್ತೇವೆ. ಅದೇ ನಿಮಿಷದಲ್ಲಿ ೯ ಮೈಲಿ ದೂರದಲ್ಲಿರುವ ಸ್ವಾತಂತ್ರ್ಯ ಸೂರ್ಯನ ಹೊಂಬೆಳಕು ಸಂಸ್ಥಾನದಲ್ಲೂ ಬೀಳಲು, ಸ್ವತಂತ್ರ ಹಿಂದೂ ದೇಶದಲ್ಲಿ ನೂತನ ಕರ್ನಾಟಕವನ್ನು ಕಟ್ಟಲು ಹೋರಾಡುತ್ತೇವೆಂದು ಪ್ರತಿಜ್ಞೆ ಮಾಡುತ್ತೇವೆ. ಸಂಸ್ಥಾನದಲ್ಲಿ ನಡೆದ ದಬ್ಬಾಳಿಕೆಯಂತೂ ಮಿತಿ ಮೀರಿದೆ. ಸ್ವಾತಂತ್ರ್ಯದ ಬಿರುಗಾಳಿ ಬೀಸುತ್ತಿದ್ದರೂ ಕೂಡ ನಾವು ಗುಲಾಮರೆಂಬುದನ್ನು ಬ್ರಿಟಿಷ್ ಇಂಡಿಯಾದ ಜನತೆಗೆ ಸಾರಿ ಹೇಳುತ್ತೇವೆ. ನಿರಂಕುಶಪ್ರಭುತ್ವದ ನೀತಿಗೆಟ್ಟ ಕೃತಿಯಿಂದ ೭೦ ಲಕ್ಷ ಜನತೆಯು ಸಹನೆ ಪರಮಾವಧಿ ಗೆರೆಯನ್ನು ದಾಟಿದೆ.

ದಿವಾನ್ ಅರ್ಕಾಟರ ದಬ್ಬಾಳಿಕೆ ಮಿತಿಮೀರಿದೆ. ಕೋಲಾರದ ಚಿನ್ನದ ಗಣಿಯ ನರಮೇಧ, ಕಾರ್ಮಿಕ ಮುಖಂಡರಿಗೆ ಶಿಕ್ಷೆ, ಗಡೀಪಾರು ಮಾಡಿದ್ದಾರೆ. ಜಾತಿಯ ಕಲಹದ ಕೊಳ್ಳಿ ಹಚ್ಚಿದ್ದಾರೆ. ಕಾಂಗ್ರೆಸ್ಸನ್ನು ತುಳಿಯುವ ಕೆಲಸ ನಿರಂತ ನಡೆಸಿದ್ದಾರೆ. ಸಂಸ್ಥಾನಾದ್ಯಂತ ಪೋಲಿಸ್ ರಾಜ್ಯ ಸ್ಥಾಪಿಸಿದ್ದಾರೆ,

ಆಹಾರ ಪರಿಸ್ಥಿತಿ ಚಿಂತಾಜನಕವಿದೆ. ಲಂಚಗೂಳಿತನ, ಬ್ಲಾಕ್‌ಮಾರ್ಕೆಟ್ ತಡೆಯಿಲ್ಲದೆ ಸಾಗುತ್ತಿದೆ. ಜನತೆಯ ಆರೋಗ್ಯ ಕೆಡುತ್ತಿದೆ. ಕೂಲಿಗಾರರ ಪರಿಸ್ಥಿತಿ ಚಿಂತಾಜನಕವಿದೆ. ಪ್ರತಿಯೊಂದು ಡಿಪೋದ ಮುಂದು ಜನತೆ ದಿನಗಟ್ಟಲೆ ಕಾದುಕುಳಿತು ಹಿಂದಿರುಗಬೇಕಾಗಿದೆ. ಮೊನ್ನೆ ಳ ನೆ

(ತಿರುಗಿಸಿ ನೋಡಿರಿ)

No. C. C. 20/47-48.
Encl: One.

Office of the Deputy Commissioner,
Shimoga District.
Dated Shimoga, 16-8-1947.

Mr. S. Muninanjappa, B.A., B.L.,
Deputy Commissioner.

29.

Dear Sir,

Subject:- Re: Observance of Independence Day on August 15t

In continuation of my D.O. letter of to-day on the above subject, I enclose herewith, a copy of the report No. S.B.8/47-48 dated 15-8-47 received from the District Superintendent of Police, Shimoga District, narrating the details of the celebrations in different parts of Shimoga Town, ~~in the town of report~~.

Yours sincerely,

S. Muninanjappa
16/8/47

V. Vedavyasacharya, Esq., B.A.,
Chief Secretary to Government,
Bangalore.

Letter No. S.B.8/47-48 dated the 15th August 1947 (6.30 P.M.) from the District Superintendent of Police, Shimoga District, to the Deputy Commissioner, Shimoga District.

Re: Observance of Independence Day on ~~the~~ August 15th.

--

In continuation of this office S.B. report of even number dated 14-8-47 on the above subject, I have the honour to state that a special meeting of the Town Municipal Council, Shimoga Town was held on the night of 14-8-47. In the beginning news from Delhi All India Radio was relayed. Afterwards a resolution was passed to send a telegram to Pandit Jawaharlal Nehru, Prime Minister, Indian Dominion expressing their hearty felicitations on behalf of the citizens of Shimoga and Municipal Council. The photos of Mr. Gandhi, Jawaharlal Nehru and Subhas Chandra Bose were not unveiled as it is said that some members raised objections and as such it was decided at this meeting to unveil the above photos on the evening of 16-8-47.

To-day in the early morning as arranged by the members of the Veerasaiva Hostel, Mr. Kadidal Manjappa hoisted the Indian National Flag in the premises of the Hostel.

By about 6.30 A.M. about 100 members of Rashtriya Seva Dal went in Prabhata Pheri commencing from Silver Jubilee Park and near Ramanna Park other students numbering about 150 joined the Prabhata Pheri and from there they passed through the main streets of the Town including Durgigudi and dispersed near Stickland Circle.

By about 8 A.M. the Indian National Flag was hoisted by Mr. K. Krishnappa, President, Town Municipal Council under the auspicies of the Rashtriya Seva Dal in the field near Silver Jubilee Park. About 150 members of the Rashtriya Seva Dal participated in the function. Mr. K. Krishnappa spoke a few words advising the students to maintain discipline and to work for the welfare of the Nation.

By about 8.30 A.M., Mr. H. Siddiah unfurled the Indian National Flag in the Silver Jubilee Park after singing of 'Vandemataram' by some girl students. In unfurling the flag, Mr. H. Siddiah explained the significance of tri-colour and Charaka in the flag and requested everybody to vow that they will be prepared to sacrifice their all to maintain glory and honour of the flag. The function terminated with the singing of a National Song by Mr. S. R. Nagappa Setty. About 1500 persons including volunteers of Rashtriya Seva Dal and a few ladies attended the function.

By about 9 A.M. the Mysore Flag and National Flag were hoisted by M/s H. S. Manjappa Gowda and K. Krishnappa respectively under the auspicies of the Town Municipal Council in front of the Town Hall.

By about 9.30 AM, a procession of the photos of Mr. Gandhi, Pandit Jawaharlal Nehru and Subhas Chandra Bose kept in a coach was taken out from National Lodge to Ramanna Setty Park via Nehru Road and Big Bazar.

By about 10.30 A.M., Mr. H. Siddaiah in opening the new Public Radio installed at Ramanna Setty Park explained the importance of Radio in these days and hoped that the Government will instal Public Radios in the villages of the State and thus enlighten the villagers. In this connection, Mr. Siddaiah appreciated the good work and progress achieved by the Government with regard to the electricity. He appealled to the Municipal Council and the generous public of the town to contribute for the installation of some radios in the town for the benefit of the public.

Next Mr. Siddaiah presided over a meeting held under the auspicies of Hotel, Soda Factory and Bakery Shop owners Association as per request of Mr. Babu Rao, President of the Association.

Mr. H. Siddaiah addressed the gathering and appreciated the starting of this association and their national spirit in celebrating the Independence Day in a befitting manner. Next referring to the sacrifices made by the leaders of the Indian National Congress ever since the advent of the Congress, in particular during 1942, he said that ~~xkkxbbxxkaadaxaxmaxaxaxxxaakadx~~ as a result of which independence has been achieved. Referring to the arrest of all India Congress leaders on 9th August 1942, he said that all the leaders were arrested throughout India in one night in an unjust manner by the Britishers which act was supported by the then members of the Viceroy's Executive Council of whom Sir. R. Ramaswamy Mudaliar, the present Dewan of Mysore was also one. He doubted the establishment of Responsible Government under such a Dewan. He further said that the Maharaja of Baroda who is the second richest man of India has said on the occasion of a Tea Party arranged at Bombay, that the honour given to him should go to leaders like Mr. Gandhi, Pandit Nehru, Sirdar Patel and others who were responsible in achieving Independence to India including the Rulers of the States. He further said that the Rajas, Nawabs and Maharajas should realise that it is the people who brought independence to them. He requested the Maharaja of Mysore to establish Responsible Government in the State, Immediately - not in due course - in his own interest and thus avoid the future unhappy incidents. He said that Mr. K. C. Reddy, President, Mysore Congress has exhibitedhis talent and efficiency in the Consambly

P.T.O.

and has earned the appreciation of its members which fact is also known to our Dewan who was present there and questioned why such talented and efficient people of the Congress be not entrusted with the powers of administration. Finally he appealed to the gathering to lend their full support in the coming struggle for the establishment of Responsible Government, which is proposed to be started from 1st September 1947. The meeting terminated by about 12 noon. Gathering was about 2,500 including lawyers, merchants, students, children and a few ladies.

Then Mr.Babu Rao, President, Hotel Workers Association presented a purse of Rs. 101/- to Mr.H. Siddaiah towards the construction of the District congress building. Mr.H. Siddaiah thanked for the same.

The members of the Local Scout Association hoisted the Mysore Flag and National Flag in the premises of the Government High School and then went in a procession in the main streets of the town holding both the flags.

The local Hindu Public and merchants hadhoisted National Flag on their houses and shops and the Muslim merchants had hoisted the Mysore National and League Flags and a few of them had hoisted only the National and the League Flags.

The procession route in the town has been decorated with green buntings, arches etc.

The Potal employees observedthe Day by hoisting the Indian National Flag on the Head Post Office building and by keeping the photo of Mr.Gandhi. It is said that the Post Master wouldread a message received from the Director General of Posts and Telegraphs to the employees this evening.

A public meeting was held in Kanyaka Parameswari Temple, Big Bazar, Shimoga under the Presidentship of Mr.Bhoopalam Puttananjappa which was arranged by the Arya Vaisya Yuvajana Sangha for observing Independence Day. Mr.Puttananjappa spoke a few words narrating the sacrifices made by the Indian Congress leaders and said that India had to be divided much against the will of Mr.Gandhi with a view to establish peace and communal harmony in India. He requested the audience to be united and help the leaders in the upliftment and welfare of the Country. About 50 people attended the meeting. The meeting which commenced at about 2.45 P.M. terminated at about 3.15 P.M. with the distribution of sweets.

Necessary Police arrangements had been made throughout. The P.R.P. detachments were stationed at convenient places and constant patrol of the armed Reserve in the Van was also arranged. The situation is calm so far. Both the Magistrates were on duty and the Ex-Officio First Class Magistrate and the undersigned were patrolling constantly. The Deputy Commissioner was also pleased to supervise.

."copy".

S. Munimanjappa

Deputy Commissioner,
Shimoga District.

Special Report.
No.S.B.62/47-48.

- Office of the Dist. Supdt. of Police, Mysore District, dated 17-8-47.

To

The District Magistrate,
Mysore District, Mysore.

Sir,

I have the honour to state that it is reported that 'Independence Day' was observed at the following places in the District on the 15th instant.

Chamarajanagar Taluk.

At Chamarajanagar the Independence Day was celeberated by all the community people including Muslims. At 9.30 A.M., before a large gathering, the Dominion and the State Flags were unfurled by Mr. Venkatasubba Setty and the Amildar respectively. There was a procession through the important streets of Chamarajanagar with the photos of H.H. the Maharaja and the National leaders, decorated on an elephant. There was a public meeting at Dhanalakshmi Theatre with the Amildar in the chair. Resolutions were passed expressing their gratitude and reverence towards the National leaders and H.H. the Maharaja of Mysore and further urging the Government for the release of Mr. K.Hanumanthiah.

At Yelandur, the procession with the photos of National leaders and H.H. the Maharaja of Mysore were being taken on a decorated cart and when the procession reached the Mosque, thelocal Muslims obstructed the same on the question of music. The procession had to be brought back and as there was strained feelings between Hindus and Muslims on this point, about 6 Muslim shops were looted, stones were pelt at the houses of Muslims and some persons were assaulted. The Police interfered and restored order. A Reserve Police contingent was sent and the situation is calm.

Cases of rioting have been registered and are being investigated. So far 35 houses have been searched.

T.Narsipur Taluk.

At T.Narsipur, there was a good gathering of officials, non-officials and school children, Municipal Councillors, before the

before the Municipal office at 9 A.M. After a brief speech by the Vice- President, explaining the significance of the Independence Day, the Mysore State Flag and the Dominion Flags were unfurled by the Amildar and the Vice President, respectively. The gathering sent in a procession, carrying the photos of National leaders and H.H. the Maharaja, through the important streets of the Town. The function terminted at 12.30. P.M. with the singing of National Anthem and distribution of sweets to the children.

The labourers of the Mysore Silk Filatures also went in a procession in the principle streets of T.Narsipur.

In the evening, there was a public meeting under the auspices of the local Congress Committee in front of Bhagavan - Talkies. Mr. H.M.Channabasappa, District Board President, Mysore, Presided. Messrs: T.Rama Rao and Siddiah, a student of Maharaja's Collage, Mysore, spoke on the occasion. The speakers dmpressed on the significance of the Day and desired that people must strive hard to get Responsible Government in Mysore State.

No activity was observed on the part of the Mohamedans in the Town.

The Independence Day was observed at Mugur, Talkad and Bannur. At Mugur and Bannur, the photos of the National leaders and H.H. the Maharaja of Mysore were kept in a chariot, which was drawn by 14 pairs of bullocks. It is reported that Muslims also took part in the celeberations.

Independence Day was observed at K.R.Nagar, Periapatna, Nanjangud, Gundlupet and Heggaddevankote. Poor people were fed at Nanjangud, Hunsur and T.Narsipur. Nothing particular to report.

II. The meeting arranged under the auspecis of the Mysore City Congress Committee, Mysore, in connection with the observance of Independence Day of the evening of the 15th instant at the Town-Hall, Mysore, which came to a close abruptly on account of rains, was again started on the 16th instant at the Town- Hall, Mysore at 7 P.M., when Messrs: S.Chenniah, Nagappa Setty, B.Narayana -

B.Narayanaswamy, Krishnappa, M.N.Jois, H.K.Kumaraswamy, T.S. Subbanna, Shankariah, U.L.Ramachandra Rao and T.Mariyappa, expressed their greatfulness to the great Political leaders of India for having liberated India from the hands of the foreigners through the weapon of non-violence and Ahimsa given by Mahatma Gandhi and without blood-shed and Civil War. They recalled to memory, the names of great heroes that sacrificed their lives in the battle-field of freedom. They regretted that the authorities in Mysore had failed in their duty in not having seen to the illumination of electric lights on the Palace on the 15th instant on account of the Independence Day. They expressed that there is independence for the Indians but not for the Mysoreans, as the people of Mysore have not yet been given Responsible Government. Mr. S.Chenniah expressed that in spite of the best efforts of the Mysore Congress since 1938, the grant of Responsible Government in the State is delayed and is being postponed from time to time by the authorities and hoped that the authorities will do well to advise the ruler to grant responsible government immidiately and he further announced that the Mysore Congress Working Committee will be meeting on the 20th instant to chalkout the programme for launching Satyagraha movement on the 1st September 47 in all probability, if by that time responsible government is not given in the Mysore State, and appealed to the audience to support the Congress in the Movement and bless the Mysore Congress with success.

Mr. H.K.Kumaraswamy, on behalf of the Students assured the Mysore Congress full support in their struggle for the establishment of responsible Government and Mr. U.L.Ramachandra Rao, on behalf of the merchants assured full support to the Mysore Congress in the Satyagraha movement, and he further regretted that the authorities did not make arrangements for the distribution of Sweets to the children on the occasion of the Independence Day Celebration.

I have etc.,

Sd/- M.G.Heblikar.

Dist. Superintendent of Police,
Mysore District.

P.T.O.

P.S.

This morning, Abdul Karim, the owner of one of the cloth shop, which has been looted at Yelandur, returned from Mysore to Yelandur and is ascertained to have sent a Wire to the Dewan in the matter, requesting him to come and visit the scene. The owners of the shops, who were advised to take charge of their shops, have at his instance refrained from doing so until the Dewan visits the place. Police pickets have been posted.

Dist. Superintendent of Police,
Mysore District.

S.B.34/47-48

Memo

Forwarded with compliments to the Chief Secretary to the Government of Mysore in Bangalore for favour of kind perusal

Dy. Commissioner
Mysore.
Dt. 17-8-47

CONFIDENTIAL.

No.CC.1-37/47-48 Office of the Superintendent of Police, Bangalore City, 13-8-1947.

From

C.CHANDY,Esq., M.A.,B.L.,
Superintendent of Police,
Bangalore City.

To

A.C.NIRVANI GOWDA,Esq.,B.A.,
Deputy Commissioner,
Bangalore District,
Bangalore.

Sir,

13/8/47

INDEPENDENCE DAY

In continuation of my special reports regarding the celebration of 15th August by various organisations and individuals in the City of Bangalore, I have the honour to state that the programme of the City Congress with regard to their taking out a procession of Bharatmata, the route provisionally fixed by them is as follows:

Start from Dharmambhudi Tank at about 10-30 A.M. pass through Anandarao Circle, Subedar Chatram Road, Majestic Circle, Kempegowda Street, Mysore Bank Circle, Avenue Road, Dodpet, Chickpet, Arcot Srinivasachar Street, Old Taragupet, join Dodpet, Market Square, Mysore Road, Briand Circle and on to Cottompet (Congress Office).

The Members of the City Congress are going about instructing the people of the different localities to have the pendals 26 feet high to enable the procession pass through, to accompany the procession through-out the route in large numbers etc.

As regards the hoisting of the Flag, it is now confirmed that as reported already, only the Dominion Flag would be hoisted in the Dharmambudhi Tank Bed.

Tilak Free Reading-Room - Sriramapur:

On the 15th morning they have Flag hoisting at 7 A.M., procession of Volunteers at 9 A.M. and a public meeting at 6 P.M. The name of Mr.K.T.Bhashyam figures in almost all the functions of the day from morning till night. The present function is expected to be presided over by him as also at the identical time over the meeting called for by the City Congress at the Municipal Gardens.

POLITICAL.

Mr.Bhashyam has become the target for attacks by a section of the public both in press and in private conversation. In the Congress circle itself he is being accused as the man behind the several amendments and attacks on the President of the Congress and others of the High Command at the recent A.M.C.C Sessions held at Mysore.

In the 'Mathrubhoomi' dated 12-8-47, lengthy matter appears apparently to criticise the Mysore Congress for starting Satyagraha but actually it is a campaign against Mr.K.T.Bhashyam for being responsible to undermine the various Presidents of the Congress at different times, he being disappointed in his ambitions etc.

Unless certain psychological factors like the students precipitating matters or Labourers going on a strike etc., as matter stands at present, it looks problematical about the Mysore Congress implementing their decision to observe Satyagraha in an effective manner within the end of this month.

MUSLIM ACTIVITIES.

Mr.H.R.Abdul Gaffar, General Secretary, Mysore State Muslim League is reported to have resigned his position in the League yesterday owing to differences with the President of the League and Mr.A.J.Khaleel who is selected as the League Representative in the Consultative Committee formed by the Government in connection with the Reforms.

xx xx xx

Some Muslims of the Mohammadan Block, Malleswaram are advised by the League Leaders to claim protection on the 18th instant when the male members would be out in connection with their Jelsa leaving the lady members and children in their houses, from the authorities.

xx xx xx

The Muslim League (City), will be having their function at 4 P.M. in front of the City Market near the Darga (as already reported) when the three Flags of the State, Dominion and the League will be hoisted. Mr. Syed Hussain, President of the City Muslim League would preside. Messrs: Mohammad Haneef, S.N.M. Razvi, Patel Basith Khan, Khaja Ghouse Mohiddin, Secretary of the Muslim Students Federation and Ghouse Mohiddin, Editor of Al-Kalam are expected to take part in the proceedings.

The leading Muslims of Kalasipalya along with some Hindus are putting Pendals and Arches in the Kalasipalya Main Road. They also intend having a meeting near Doddanna Hall the same day evening.

STUDENTS.

The Council of Action of which Mr.M.V.Krishnappa is the President is meeting on the 18th instant. Mr.T. Siddalingiah along with the members of the Advisory Committee will also attend the Meeting when the future course of action by the students and the attitude of the students towards the State Congress in their anticipating Satyagraha from 1st September 1947 will be discussed.

On the 24th the Karnataka Student Congress Committee meets at Mysore to discuss the above subject.

Students Federation:

A meeting was held under the auspices of the Federation at the City Y.M.C.A. last evening at about 6 P.M. under the Presidentship of Miss: Vimala, when about 100 students had gathered.

Mr.Balaratnam, Advocate, spoke first about the significance of August 15th. In doing so he traced the history of India from the year 1857. August 1942 was the turning point when the famous "QUIT INDIA" Resolution was adopted by the Congress. He criticised the Britishers for the division of the Country and wished that India becomes united in the near future. He exhorted the students as the future citizens to take interest in Politics.

Mr.D.R.Krishnamurthy who is now at K.G.F. was the

next speaker. He also traversed the same grounds as the previous speaker and made pointed references to the Jallianwala Bagh Tragedy and Navy Mutiny at Bombay. He sarcastically remarked that the same British Officers who refused to bow down before the National Flag ~~arm~~ have accepted posts in the present Indian Government. He pleaded for the abolition of capitalism and extermination of Birlas, Tatas and Dalmias in the country. Referring to the Native States he stated that the Rulers are now going to Sirdar Patel and are trying to woo him. He criticised Sir C.P. Ramaswamy Iyer of Travancore and the Nizam of Hyderabad for enlarging his army and the Mysore Government for having adopted"unconstitutional" methods in the election of representative-s to the Consambly.

After a few words by the Chairman of the Meeting and by Mr.Y.R.Satya, Secretary of the Student Federation the meeting came to a close at about 7 P.M.

LABOUR.

The labourers of the three leading Mills have got their anticipated special bonus and holidays for the Independence Day. The Mysore and Minerva Mills have declared holidays on the 15th and 16th instants with full pay. They will be given Special Bonus calculated at ~~1/8th~~ 1/8th of their pay for the period 1-1-47 to 31-8-47.

The Binny Mill Management have also declared special Bonus calculated at 1/12th portion for a period of six months and two holidays with full pay. Since only 1/12th is given the workers are pressing for 1/8th as in the case of Mysore & Minerva Mill Workers.

Transport Workers:

They are given one months pay as bonus but with regard to holidays the Management have told the employees that if they are given holidays the public would be handicapped especially, at the time of celebration of Independence Day. They have no objection to grant 1/2 a day holiday on the 15th instant.

Railway Employees Association:

Last evening there was a Press Conference at the Anglo Indian Institute when Mr.M.S.Krishnan of the Communist Party was also present. Mr.Chaturvedi Rama Rao, Clerk in the D.T.S. Office intimated the Pressmen about the alleged break-down of their talks with the Dewan and the latters advice to them not to affiliate their body to the All India Organisation and to give an assurance of non-interference in politics etc.

The Association is calling for a General Body on the 15th evening to intimate the employees about their position.

xx xx xx

There is a feeling that the Mysore State Railways will come under the Indian Dominion Railways after the 20th instant and that equal status would be given to the employees as in the case of the other First Class Railways.

One Mr.Ramaiah, Engineering Department and Mr.Sriramalu of Loco-shed feel that they should approach Mr.Bhashyam and take his advice as the Communists who are guiding them may commit them to extreme course of action.

One Narasappa and Raja Rao who had been to Bangalore for interview with the Dewan returned to Mysore yesterday.

The Workers of Loco and Carriage Department have collected signatures to a request for holidays on the 15th and 16th instants in connection with the Independence Day.

Some workers wanted to go on a strike on the 14th instant itself as it will be a key chance for them to get their demands immediately. The majority advised them against such a course as they have also to celebrate the country's Independence being Indians, etc.

I have etc.,

B. Handy

Superintendent of Police,
Bangalore City.

20

CB C.C.1-37/47-48

WO 17/8/47

Forwarded with Compliments to the Chief Secretary to the Government of Mysore, Bangalore for favour of information.

H.C. Mir
Deputy Commissioner 14/8/47
Bangalore District
15/8/47.

ಆಗಸ್ಟ್ ೧೫
ಸ್ವಾತಂತ್ರ್ಯ ದಿನಾಚರಣೆ

ಇದೇ ಆಗಸ್ಟ್ ೧೫ನೇ ತಾರೀಖಿನ ದಿನ ನಮಗೆ ಬರಲಿರುವ ಸ್ವಾತಂತ್ರ್ಯಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸುವ ಸಲುವಾಗಿ ಚಾಮರಾಜಪೇಟೆ ಅಪ್ಪಾಜಪ್ಪ ಅಗ್ರಹಾರದ ನಿವಾಸಿಗಳು ಈ ಕೆಳಗೆ ವಿವರಿಸಿರುವಂತೆ ಕಾರ್ಯಕ್ರಮವನ್ನು ನಿಶ್ಚಯಿಸಿರುತ್ತಾರೆ. ಸರ್ವರೂ ಈ ದಿನಾಚರಣೆಯನ್ನು ಸಂತೋಷದಿಂದ ಆಚರಿಸಬೇಕೆಂದು ವಿನಂತಿ.

ಕಾರ್ಯಕ್ರಮ :

೧೪-೮-೪೭ : ರಾತ್ರಿ ೧೨ ಗಂಟೆ ೧ ನಿಮಿಷಕ್ಕೆ ಶ್ರೀ ರಾಮೇಶ್ವರ ದೇವಸ್ಥಾನದಲ್ಲಿ ಅಭಿಷೇಕ ಮತ್ತು ಮಹಾ ಮಂಗಳಾರತಿ.

೧೫-೮-೪೭ : ಬೆಳಗ್ಗೆ ೭ ಗಂಟೆಗೆ ಪ್ರಭಾತ್ ಫೇರಿ
೮ ಗಂಟೆಗೆ ರಾಷ್ಟ್ರಧ್ವಜಾರೋಹಣ.
ರಾತ್ರಿ ೮ ಗಂಟೆಗೆ ಸಭೆ.

ಪ್ರತಿ ಮನೆಯಲ್ಲಿಯೂ ನಡೆಯಿಸಬೇಕಾದ ಕಾರ್ಯಕ್ರಮ :
ಪ್ರತಿ ಮನೆಮೇಲೆಯೂ ರಾಷ್ಟ್ರ ಧ್ವಜ ಹಾರಾಡಬೇಕು.
೧೪-೮-೪೭ ರ ರಾತ್ರಿ ೧೨ ಗಂಟೆಯಲ್ಲಿ ದೀಪಾಲಂಕಾರ.
೧೫-೮-೪೭ ರ ಬೆಳಿಗ್ಗೆ ರಂಗವಲ್ಲಿ ತಳಿರು ತೋರಣಗಳಿಂದ ಅಲಂಕಾರ.
೧೫-೮-೪೭ ಮತ್ತು ೧೬-೮-೪೭ ಸಂಜೆ ದೀಪಾಲಂಕಾರ.

ಅಪ್ಪಾಜಪ್ಪ ಅಗ್ರಹಾರದ ನಿವಾಸಿಗಳು.

ಚಂಪಾ ಆಂಡ್ ಕೋ., ಬಿ-ಸಿಟಿ.

ಸ್ವಾತಂತ್ರ್ಯ ದಿನಾಚರಣೆ ಮಾಡಿ

ಮೈಸೂರು ಸಂಸ್ಥಾನದ ಹರಿಜನ ಸೇವಕ ಸಂಘದಾಶ್ರಯದಲ್ಲಿ

ತಾ|| ೧೫-೮-೧೯೪೭ ನೇ ಶುಕ್ರವಾರ

"ಸ್ವಾತಂತ್ರ್ಯ ದಿನೋತ್ಸವವು"

ಶ್ರೀರಾಮಪುರದ ಲೇಬರ್ ಕಾಲೊನಿಯಲ್ಲಿರುವ

ಸಂಘದ ಆವರಣದಲ್ಲಿ ಆಚರಿಸಲ್ಪಡುವುದು

ಶ್ರೀಮಾನ್ ಪಾವುಡಿ ಸುಬ್ಬರಾವು ಶೆಟ್ಟರವರು

ಅಧ್ಯಕ್ಷತೆಯನ್ನು ವಹಿಸುವರು.

ಹಲವು ಮಹನೀಯರ ಭಾಷಣಗಳಾಗುವುವು

ತಾವು ಉತ್ಸವಕ್ಕೆ ದಯಮಾಡಿಸಬೇಕಾಗಿ ಪ್ರಾರ್ಥನೆ.

ತಾ|| ೧೫-೮-೪೭.
ಶ್ರೀರಾಮಪುರ ಬೆಂಗಳೂರು.

ಸ್ವಾಮಿ ವಿಶ್ವಾನಂದ
ಪ್ರಿಯವ್ರತ.
ಕಾರ್ಯದರ್ಶಿಗಳು.

ಕಾರ್ಯಕ್ರಮ:

ಮುಂಜಾನೆ 6-30 ಘಂಟೆಗೆ: ಪ್ರಭಾತ ಫೇರಿ.
ಪ್ರಾತಃಕಾಲ: 9 ಘಂಟೆಗೆ: ಧ್ವಜವಂದನೆ.
9-30 ಘಂಟೆಗೆ: ಅಗ್ನಿ ಹೋತ್ರ.
10 ಘಂಟೆಗೆ: ಸಭೆ.

ಚಂಪಾ ಆಂಡ್ ಕೋ., ಬಿ-ಸಿಟಿ.

ಆಗಸ್ಟ್ ೧೫ ರಂದು

ಸ್ವಾತಂತ್ರ್ಯ ದಿನಾಚರಣೆ ಮಾಡಿ!

ಗೆಳೆಯರೆ,

ನಮ್ಮ ಸಂಘ ಸ್ಥಾಪಿತವಾಗಿ ಕೇವಲ ಮೂರು ತಿಂಗಳುಗಳು ಮಾತ್ರವಾದರೂ ನಮ್ಮೆಲ್ಲರ ಒಗ್ಗಟ್ಟಿನ ಬಲದಿಂದ ನಮಗೆ ಇದು ವರೆಗೆ ಇದ್ದ ರೇಷನ್ ತೊಂದರೆಗಳು ಕಡಮೆಯಾಗಲಿವೆ. ಇದೇ ಒಗ್ಗಟ್ಟನ್ನು ಮುಂದುವರೆಸಿ ಸಂಘವನ್ನು ಬಲಗೊಳಿಸಬೇಕು.

ನಿಮಗೆಲ್ಲ ತಿಳಿದಂತೆ ಆಗಸ್ಟ್ ೧೫ ರಂದು ಬ್ರಿಟಿಷರು ನಮ್ಮ ದೇಶದಿಂದ ಹೊರಹೊರಡಲಿದ್ದಾರೆ. ಆದ್ದರಿಂದ ಆಗಸ್ಟ್ ೧೫ ಹಿಂದೂಸ್ಥಾನದ ಜನತೆಗೆ ಆನಂದದ ದಿನ. ಈ ದಿನವನ್ನು ಸ್ವಾತಂತ್ರ್ಯಪಾಳ್ಯದ ಎಲ್ಲ ನಿವಾಸಿಗಳೂ ಆನಂದದಿಂದ ಆಚರಿಸ ಬೇಕಾಗಿ ಕೋರಿಕೆ.

೧೪ನೇ ತಾರೀಖು ರಾತ್ರಿ ಸಂಘದಾಶ್ರಯದಲ್ಲಿ **ರಾಷ್ಟ್ರಧ್ವಜ** ವನ್ನು ಪಾಳ್ಯದಲ್ಲಿ ಏರಿಸಲಾಗುವುದು. ಸಭೆ ಭಜನೆ ಮೊದಲಾದು ವುಗಳನ್ನು ಏರ್ಪಡಿಸಿದೆ. ಪಾಳ್ಯದ ನಿವಾಸಿಗಳೆಲ್ಲಾ ಮೇಲ್ಕಂಡ ಕಾರ್ಯಕ್ರಮಗಳಲ್ಲೂ, ಕಾಂಗ್ರೆಸ್ ಕಮಿಟಿ ಸೂಚಿಸಿರುವ ಕಾರ್ಯ ಕ್ರಮದಲ್ಲೂ ಭಾಗ ವಹಿಸಬೇಕಾಗಿ ಕೋರಿಕೆ.

ರಾಷ್ಟ್ರಧ್ವಜವು ಎಲ್ಲೆಲ್ಲೂ ಹಾರಾಡಲಿ!
ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪಿತವಾಗಲಿ!!

ಜೈ ಹಿಂದ್

ಹೆಚ್. ಎ. ರಾಮಸ್ವಾಮಿ,
ಕಾರ್ಯದರ್ಶಿ.
ಸ್ವಾತಂತ್ರ್ಯಪಾಳ್ಯ ಸಂಘ.

ಚಂಪಾ ಅಂಡ್ ಕೋ., ಪ್ರಿಂಟರ್ಸ್.

ಆಗಸ್ಟು ೧೫ ರಲ್ಲಿ ಸ್ವಾತಂತ್ರ್ಯ ದಿನವನ್ನಾಚರಿಸಿ

ಬೆಂಗಳೂರಿನ ಪ್ರಜೆಗಳಲ್ಲಿ ಕಾಂಗ್ರೆಸ್ಸಿನ ಮನವಿ

ಕಳೆದ ಎರಡು ಶತಮಾನಗಳಿಂದ ನಾವು ಪರದೇಶದವರಿಗೆ ದಾಸ್ಯರಾಗಿದ್ದ ಕಾಲ ಹೋಗಿ ನಮ್ಮ ನಾಡು ಸ್ವತಂತ್ರವಾಗುತ್ತಿರುವ ಸನ್ನಿವೇಶದಲ್ಲಿದ್ದೇವೆ.

ನಮ್ಮ ಸ್ವಾತಂತ್ರ್ಯದ ಹೋರಾಟ ಜಗತ್ತಿನ ಯಾವ ರಾಷ್ಟ್ರದ ಹೋರಾಟಕ್ಕೂ ಮಿಗಿಲಾದ ನೈತಿಕ ಶಕ್ತಿಯಿಂದ ನಡೆದು ಬಂದಿದೆ. ತ್ಯಾಗ, ಬಲಿದಾನ, ಕಷ್ಟ ಪರಂಪರೆಗಳನ್ನೆದುರಿಸುವ ಎದೆಗಾರಿಕೆಯೇ ನಮ್ಮ ಸಮರಾಸ್ತ್ರಗಳಾಗಿ ಅವುಗಳ ಪ್ರಯೋಗದಿಂದ ಭಾರತ ಸ್ವಾತಂತ್ರ್ಯ ಸಿದ್ಧಿಯಾಗುತ್ತಿದೆ.

೧೯೨೦-೨೧ರಲ್ಲಿ ಅಸಹಕಾರ ಚಳುವಳಿ, ೩೦-೩೧ ರಲ್ಲಿ ಶಾಸನಭಂಗ ಚಳುವಳಿಗಳು ನಡೆದವು ೧೯೪೨ ರಲ್ಲಿ "ಬ್ರಿಟಿಷರೇ ಭಾರತ ಬಿಟ್ಟು ಹೊರಡಿ" ಯೆಂಬ ಕ್ರಾಂತಿಯಲ್ಲಿ ನಮ್ಮ ಸ್ವಾತಂತ್ರ್ಯ ಹೋರಾಟ ಮುಗಿಲು ಮುಟ್ಟಿತು. ಭಾರತದ ಹೊರಗೂ ಆಜಾದ್-ಹಿಂದ್-ಫೌಜಿನ ಸ್ವಾತಂತ್ರ್ಯ ಸಮರ ನಮ್ಮ ದೇಶವನ್ನು ಸ್ವರಾಜ್ಯದ ಬಳಿಗೆ ಒಯ್ದು ಈ ತಿಂಗಳು ೧೫ನೇ ತಾರೀಖು ಭಾರತ ಸ್ವಾತಂತ್ರ್ಯ ದಿನವನ್ನಾಚರಿಸುವಂತಾಗಿದೆ.

೧೯೪೨ ರಲ್ಲಿ ಯಾವ ತಿಂಗಳು ೯ನೇ ತಾರೀಖು "ಬ್ರಿಟಿಷರೇ ಭಾರತ ಬಿಟ್ಟು ಹೊರಡಿ" ಎಂದು ನಮ್ಮ ನಾಯಕರು ಘೋಷಿಸಿ ಸೆರೆಮನೆಗೆ ಹೋಗಬೇಕಾಗಿ ಬಂದು ಅಂದಿನಿಂದ ಸ್ವಾತಂತ್ರ್ಯಕ್ಕಾಗಿ "ದುಡಿ ಇಲ್ಲ ಮಡಿ" ಯೆಂಬ ರಾಷ್ಟ್ರೀಯ ಕ್ರಾಂತಿಯೇ ಮೊದಲಾಯಿತೋ ಅದೇ ಈ ಆಗಸ್ಟ್ ತಿಂಗಳ ೧೫ನೇ ತಾರೀಖು ಭಾರತದ ಯುಗಗಳ ಇತಿಹಾಸದಲ್ಲೇ ಪ್ರಸಿದ್ಧವಾದ ದಿನವಾಗಿದೆ. ಅಂದು ಭಾರತಾಮ್ಬೆಯ ಸ್ವಾತಂತ್ರ್ಯ ದಿನವನ್ನು ಆಚರಿಸಲಾಗುತ್ತದೆ. ಆ ದಿನ ಎಲ್ಲ ಪ್ರಾಂತಗಳಲ್ಲಿ, ಸಂಸ್ಥಾನಗಳಲ್ಲಿ ಪ್ರಜಾಕೋಟಿ ಪಾರತಂತ್ರ್ಯದಿಂದ ಬಿಡುಗಡೆಯಾದುದೆಂದು ಹೆಮ್ಮೆ ಪಡುವ ದಿನ. ಅಷ್ಟೇ ಅಲ್ಲ. ನಮ್ಮ ಬಿಡುಗಡೆಗಾಗಿ ಎಲ್ಲ ಸುಖವನ್ನೂ ತ್ಯಜಿಸಿ, ಕಾರಾಗೃಹ ವಾಸ ಮತ್ತು ಪರ ಪ್ರಭುತ್ವದ ಎಲ್ಲ ದೌರ್ಜನ್ಯ, ಹಿಂಸೆಗಳನ್ನು ಹುಸಿನಗೆಯಿಂದ ಅನುಭವಿಸಿದ ಅಸಂಖ್ಯಾತ ಅಣ್ಣತಮ್ಮಂದಿರನ್ನೂ, ಅಕ್ಕತಂಗಿಯರನ್ನೂ ನೆನಪಿಗೆ ತಂದುಕೊಳ್ಳುವ ದಿನ. ಸ್ವಾತಂತ್ರ್ಯದ ಹುಚ್ಚು ಹಿಡಿದು ಆದನ್ನು ಸಾಧಿಸುವುದಕ್ಕಾಗಿ ಗಲ್ಲಿಗೇರಿದ ಸ್ವಾತಂತ್ರ್ಯ ಸಮರದ ವಿರಾಗ್ರಣಿಗಳಿಗೆ ನಾವೆಲ್ಲ ಮಣಿಯುವ ದಿನ ಆಗಸ್ಟು ೧೫. ಇದುವರೆಗೂ ನಮ್ಮನ್ನು ಕಾಡುತ್ತಿದ್ದ ಬಡತನ, ಭೇದಭಾವನೆ ಮತ್ತು ನಾವನುಭವಿಸಿದ ಅಗೌರವ ಅವಮಾನಗಳು ಕೊನೆಗಾಣುವ ದಿನ. ಈ ದಿನದಿಂದ ಭಾರತಮಾತೆಯ ಮಕ್ಕಳಾದ ನಾವು ಸರ್ವತಂತ್ರ ಸ್ವತಂತ್ರರಾಷ್ಟ್ರದ ಪ್ರಜೆಗಳಂತೆ ನಮ್ಮ ಹಿರಿಯಾಸೆಯಂತೆ ಭವಿಷ್ಯವನ್ನು ರೂಪಿಸಿಕೊಳ್ಳತಕ್ಕವರಾಗಿ ನಡೆದುಕೊಳ್ಳೋಣ. ಸ್ವತಂತ್ರ ಭಾರತದ ರಿಪಬ್ಲಿಕ್ ಜಗತ್ತಿನ ಹಿರಿಯ ರಾಷ್ಟ್ರಗಳ ಸರಿಸಮಾನವಾದ ಸ್ಥಾನಮಾನಗಳನ್ನು ಪಡೆಯಬೇಕಾದರೆ ಭಾರತೀಯರೇ ಆದ ಸಂಸ್ಥಾನಗಳ ಪ್ರಜೆಗಳಿಗೆ ರಾಜ್ಯಾಡಳಿತ ಸಿಗಬೇಕು. ಇಲ್ಲೂ ಪ್ರಜಾಧಿಕಾರವನ್ನು ಕೂಡಲೇ ಸ್ಥಾಪಿಸಿ ಮೈಸೂರು ಸ್ವತಂತ್ರಭಾರತದ ಅಂಗಸಂಸ್ಥಾನವಾಗಿ ಬಾಳುವಂತೆ ಮಾಡಲು ಸಿದ್ಧರಾಗಿದ್ದೇವೆಂಬುದನ್ನು ಜಗತ್ತಿಗೆ ತಿಳಿಸುವ ದಿನವೂ ಆಗಸ್ಟು ೧೫.

ಆಗಸ್ಟು ೧೫ರಂದು ಎಲ್ಲೆಡೆಯಲ್ಲೂ ಸ್ವಾತಂತ್ರ್ಯ ದಿನವನ್ನಾಚರಿಸುವಂತೆ, ಬೆಂಗಳೂರು ನಗರದ ಪ್ರಜೆಗಳೆಲ್ಲರೂ ಆಚರಿಸಬೇಕೆಂದು ಬೆಂಗಳೂರು ನಗರ ಕಾಂಗ್ರೆಸ್ ಸಮಿತಿಯು ತೀರ್ಮಾನಿಸಿದೆ. ಆ ದಿನವನ್ನು ಪ್ರಜಾಸ್ತೋವ ವಿಜೃಂಭಣೆಯಿಂದ ಆಚರಿಸಬೇಕು. ಮೊನ್ನೆ ತಾನೆ

ಭಾರತದ ರಾಜ್ಯಾಂಗ ಸಭೆಯಲ್ಲಿ ತೀರ್ಮಾನಿಸಿದ ತ್ರಿವರ್ಣ ರಾಷ್ಟ್ರಧ್ವಜವನ್ನು ಮನೆಮನೆಯ ಮೇಲೂ ಹಾರಿಸಬೇಕು. ಆ ದಿನ ಬಡವರಿಗೆ, ಮಕ್ಕಳಿಗೆ ಸಿಹಿತಿಂಡಿಯನ್ನು ಹಂಚಿ ನಾಡಿನ ಸಂತೋಷವನ್ನು ಪ್ರದರ್ಶನಮಾಡಬಹುದು.

ಆಗಸ್ಟ್ ೧೫ರಲ್ಲಿ ಬೆಂಗಳೂರು ಪುರಜನರು ಕೈಗೊಳ್ಳಬೇಕಾದ, ಭಾಗವಹಿಸಬೇಕಾದ ಕಾರ್ಯಕ್ರಮಗಳಲ್ಲಿ ಮುಖ್ಯವಾದುವು ಪ್ರಭಾತ್‌ಫೇರಿ, ರಾಷ್ಟ್ರಧ್ವಜವಂದನೆ, ಪೌರಪಣಿಗೆ ಮತ್ತು ಬಹಿರಂಗ ಸಭೆ. ಈ ಕಾರ್ಯಕ್ರಮಗಳ ವಿವರಗಳನ್ನು ನಗರ ಕಾಂಗ್ರೆಸ್ ಸಮಿತಿಯು ಆಗಿಂದಾಗ್ಗೆ ಪತ್ರಿಕೆಗಳಲ್ಲಿ ಪ್ರಕಟಿಸುತ್ತದೆ. ಅದರಂತೆ ಬೆಂಗಳೂರಿನ ಪ್ರಜೆಗಳು ಈ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಬೇಕೆಂದು ಬೆಂಗಳೂರು ನಗರ ಕಾಂಗ್ರೆಸ್ ಸಮಿತಿಯು ಪ್ರಾರ್ಥಿಸುತ್ತದೆ.

ಆಗಸ್ಟ್ ೧೫, ರಂದು ನಮ್ಮ ನಾಡು ಸಂಪೂರ್ಣ ಸ್ವರಾಜ್ಯ ಪಡೆಯಿತೆಂದು ಆನಂದದಿಂದ ಹಿಗ್ಗುವ ದಿನ ಮಾತ್ರವಲ್ಲ. ಯಾಕೆಂದರೆ ಅದಿಯಿಂದ ಅಖಂಡವಾಗಿದ್ದ ಭಾರತ ದೇಶ ಇಂದು ಸ್ವತಂತ್ರವಾದರೂ ಮತದ ಆಧಾರದ ಮೇಲೆ ಇಬ್ಭಾಗವಾಗಿರುವುದು ನಮ್ಮ ಹಗ್ಗನ್ನು ಕುಗ್ಗಿಸಿದೆ. ಛಿದ್ರ ಕೋಟಿ ಭಾರತೀಯರೆಲ್ಲರ ಶ್ರೇಯಸ್ಸಿಗಾಗಿ ನಮ್ಮ ದೇಶ ಐಕ್ಯರಾಷ್ಟ್ರವಾಗಬೇಕು. ಇಂದಿನ ಸ್ವತಂತ್ರ ಭಾರತವನ್ನು ಪುನಃ ಪರಕೀಯರಬಲಿಗೆ ಬೀಳದಂತೆ ರಕ್ಷಿಸುವ ನಮ್ಮ ಹೊಣೆಗಾರಿಕೆ ಬೇರೆ ಇದೆ. ಆಗಸ್ಟ್ ೧೫ರ ದಿನ ನಾವೆಲ್ಲ ಈ ಕರ್ತವ್ಯವನ್ನೂ ನಿರ್ವಹಿಸುತ್ತೇವೆಂದು ಪಣತೊಡಬೇಕು.

ಈ ಪವಿತ್ರ ದಿನಾಚರಣೆಯನ್ನು ವಿಜೃಂಭಣೆಯಿಂದ, ಗಾಂಭೀರ್ಯದಿಂದ, ಆಚರಿಸಬೇಕೆಂಬುದೇ ಕಾಂಗ್ರೆಸ್ಸಿನ ಅಪೇಕ್ಷೆ, ಅದರಂತೆ ನಮ್ಮ ನಗರದ ಪ್ರಜೆಗಳೆಲ್ಲ, ಶ್ರೀಮಂತರು ಬಡವರು, ಯುವಕರು ವಿದ್ಯಾರ್ಥಿಗಳು, ವರ್ತಕರು, ಕಾರ್ಮಿಕರು ಎಲ್ಲರೂ ಈ ದಿನಾಚರಣೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ನಗರ ಕಾಂಗ್ರೆಸ್ ಸಮಿತಿಯು ಮತ್ತೊಮ್ಮೆ ಬೆಂಗಳೂರು ಪ್ರಜೆಗಳನ್ನು ಪ್ರಾರ್ಥಿಸುತ್ತದೆ.

೧-೮-೪೭.
ಬೆಂಗಳೂರು ನಗರ.

ಕೆ. ಟಿ. ಭಾಷ್ಯಂ.
ಅಧ್ಯಕ್ಷ.
ಬೆಂಗಳೂರು ನಗರ ಕಾಂಗ್ರೆಸ್ ಸಮಿತಿ.

ಆಗಸ್ಟ್ ೧೫ ರಂದು

ಸ್ವಾತಂತ್ರ್ಯ ದಿನಾಚರಣೆಮಾಡಿ!

ಸ್ವಾತಂತ್ರ್ಯೋತ್ಸವದಲ್ಲಿ ಭಾಗಿಗಳಾಗಿ!!

ಗೆಳೆಯರೇ!

ನಮ್ಮ ದೇಶದ ಜನತೆ ಕಳೆದ ೬೦ ವರುಷಗಳಿಂದ ಎಡಬಿಡದೆ ನಡೆಸಿದ ಹೋರಾಟದ ಫಲವಾಗಿ ಆಗಸ್ಟ್ ೧೫ರಂದು ಬ್ರಿಟಿಷರು ಭಾರತೀಯರಿಗೆ ಅಧಿಕಾರ ವಹಿಸಿಕೊಡಲಿದ್ದಾರೆ. ಈದಿನ ಸ್ವಾತಂತ್ರ್ಯ ಯೋಧರನ್ನು ನೆನೆದು ಅವರ ತ್ಯಾಗಮಯ ಜೀವನಕ್ಕೆ ಗೌರವ ಸೂಚಿಸಬೇಕಾದುದು ಎಲ್ಲ ಕೆಲಸಗಾರರ ಮೊದಲನೆಯ ಕರ್ತವ್ಯ. ಜೊತೆಗೆ ಪರಕೀಯ ಆಳ್ವಿಕೆ ನಮ್ಮ ದೇಶದಿಂದ ಕದಲುವ ಈ ಐತಿಹಾಸಿಕ ದಿನವನ್ನು ಕಾಂಗ್ರೆಸ್ ಸಂಸ್ಥೆಯವರು ಹಾಕಿರುವ ಕಾರ್ಯಕ್ರಮದಂತೆ ಮತ್ತು ಸಂಘದವರು ಸೂಚಿಸುವ ರೀತಿಯಲ್ಲಿ, ಎಲ್ಲ ಕೆಲಸಗಾರರೂ ಉತ್ಸಾಹದಿಂದ ಆಚರಿಸಬೇಕಾಗಿ ಪ್ರಾರ್ಥನೆ.

೧೫-೮-೪೭ ನೇ ಶುಕ್ರವಾರ ಬೆಳಗ್ಗೆ ೮ ಘಂ. ಧ್ವಜವಂದನೆ

ಸಂಘದ ಬಳಿಯಲ್ಲಿ

ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರ ಕೂಡಲೇ ಏರ್ಪಡಲಿ!

ಕಾರ್ಮಿಕರ ಬೇಡಿಕೆಗಳು ಈಡೇರಲಿ!!

ದುಡಿಯುವವರ ರಾಜ್ಯ ಬರಲಿ!

ರಾಷ್ಟ್ರಧ್ವಜಗಳು ಎಲ್ಲೆಲ್ಲೂ ಹಾರಾಡಲಿ!

ಇಂಕಿಲಾಬ್ ಜಿಂದಾಬಾದ್!

ಎಸ್. ನಾಗಭೂಷಣ
ಕಾರ್ಯದರ್ಶಿ.

ಕಾರ್ಯಕಾರಿ ಸಮಿತಿ.

ಮಿನರ್ವಾ ಮಿಲ್ಸ್ ಕೆಲಸಗಾರರ ಸಂಘ.

ಜಂಟಾ ಅಂಡ್ ಕೋ., ಬಿ.ಸಿ.ಟಿ.

॥ ವಂದೇ ಮಾತರಂ ॥

ಯುವಕ ಸಂಘ, ಗಾಂಧಿ ಸೇವಾ ಸಮಿತಿ
ಅನೇಯ ವಾರ್ಡ್ ಕಾಂಗ್ರೆಸ್ ಸಮಿತಿ
ಆಗಸ್ಟ್ ೧೫ರ ಸ್ವಾತಂತ್ರ್ಯ ದಿನಾಚರಣೆ

ಸ್ವತಂತ್ರ ನಾಡಹಬ್ಬ

ಇದೇ ತಾ॥ ೧೪-೮-೪೭ರ ಗುರುವಾರದಿಂದ ೧೬-೮-೪೭ರ ಭಾನುವಾರದವರೆಗೂ ಗಾಂಧಿ ಬಜಾರಿನ ಯುವಕ ಸಂಘದ ಆಶ್ರಯದಲ್ಲಿ ನಗರ ಕಾಂಗ್ರೆಸ್ ಸಮಿತಿಯ ಸಹಾನುಭೂತಿಯೊಡನೆ ಸ್ವಾತಂತ್ರ್ಯ ದಿನಾಚರಣೆಯನ್ನು ಅತಿ ವಿಜೃಂಭಣೆಯಿಂದ ಆಚರಿಸಲಾಗುವುದು.

ಕಾರ್ಯಕ್ರಮ :

ತಾ॥ ೧೪-೮-೪೭ರ ರಾತ್ರಿ ೧೦ ಘಂಟೆ ೧೦ ನಿಮಿಷಕ್ಕೆ ಕಲಾಮಂದಿರದ ಸುಬ್ಬರಾಯರ ಸಹಾಯದಿಂದ ಬಹಿರಂಗ ಸಭೆ.

ಶ್ರೀ ಡಿ. ವಿ. ಗುಂಡಪ್ಪ ಮತ್ತು ಶ್ರೀ ಪಿ. ಆರ್. ರಾಮಯ್ಯನವರು ಭಾಷಣ ಮಾಡುವರು. ಅದೇ ಕಾಲಕ್ಕೆ ಕರಣಿಕ ರಸ್ತೆಯಲ್ಲಿರುವ ಕರ್ನಾಟಕ ಹಿಂದಿ ಮಹಾ ವಿದ್ಯಾಲಯದಲ್ಲಿ ಸೂತ್ರಯಜ್ಞ, ಜಯಘೋಷಣೆ, ಪ್ರಾರ್ಥನೆ, ಮತ್ತು ದೀಪಾಲಂಕಾರ. ಬಸವನಗುಡಿಯ ಎಲ್ಲಾ ದೇವಾಲಯಗಳಲ್ಲೂ ಮಹಾಮಂಗಳಾರತಿ.

ತಾ॥ ೧೫-೮-೪೭ರ ಶುಕ್ರವಾರ ಬೆಳಿಗ್ಗೆ ೪-೩೦ ಕ್ಕೆ ಹಿಂದಿ ವಿದ್ಯಾಲಯದಿಂದ ಪ್ರಭಾತ ಫೇರಿ ೬ ಘಂಟೆಗೆ ಯುವಕ ಸಂಘದಿಂದ ಪ್ರಭಾತ ಫೇರಿ ಬಸವನಗುಡಿ ಮತ್ತು ಶಂಕರಪುರದ ಪ್ರಮುಖ ರಸ್ತೆಗಳಲ್ಲಿ ಬೆಳಿಗ್ಗೆ ೮ ಘಂಟೆಗೆ ಗಾಂಧಿಬಜಾರಿನ ಯುವಕ ಸಂಘದಲ್ಲಿ **ರಾಷ್ಟ್ರಧ್ವಜಾರೋಹಣ.**

೯ ಘಂಟೆಗೆ ಯುವಕ ಸಂಘದಿಂದ ಸುಭಾಷ್ ನಗರಕ್ಕೆ ರಾಷ್ಟ್ರೀಯ ಧ್ವಜಮೊಡನೆ ಮೆರವಣಿಗೆ.

ಮಧ್ಯಾಹ್ನ ೨ ಘಂಟೆಗೆ ಬಾಲಕ ಬಾಲಕಿಯರಿಗೆ ಸಿಹಿ ತಿಂಡಿ ಹಂಚಲಾಗುವುದು.

ಮಧ್ಯಾಹ್ನ ೩ ಘಂಟೆಗೆ ಯುವಕ ಸಂಘದಿಂದ ೯ ಡಿವಿಜನಗಳನ್ನು ಸುತ್ತುವ ಸೈಕಲ್ ಮೆರವಣಿಗೆ (೧೯೪೭ ರ ವಿದ್ಯಾರ್ಥಿಗಳ ಮುಖಂಡತ್ವದಿಂದ)

ರಾತ್ರಿ ೮ ಘಂಟೆಗೆ ಯುವಕ ಸಂಘದಲ್ಲಿ ಬಹಿರಂಗ ಸಭೆ ಶ್ರೀ ಎಂ. ವಿ. ಗೋಪಾಲ ಸ್ವಾಮಿ ಐಯ್ಯಂಗಾರ್‌ರವರು ಅಧ್ಯಕ್ಷತೆ ವಹಿಸುವರು. ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ ಮತ್ತು ಕೆ. ಎಸ್. ಕುಮಾರ್, ಶ್ರೀಮತಿ ಸರೋಜಮ್ಮ ಇವರುಗಳಿಂದ ಭಾಷಣ.

೧೬-೮-೪೭ ರ ಶನಿವಾರ ಬೆಳಿಗ್ಗೆ ೪-೩೦ಕ್ಕೆ ಹಿಂದಿ ವಿದ್ಯಾಲಯದಿಂದ ಪ್ರಭಾತ ಫೇರಿ ಮತ್ತು ೬ ಘಂಟೆಗೆ ಯುವಕ ಸಂಘದಿಂದ ಪ್ರಭಾತ ಫೇರಿ ೮ ಘಂಟೆಗೆ ಯುವಕ ಸಂಘದ ಬಳಿ ಧ್ವಜಾರೋಹಣ. ಸಂಜೆ ೬ ಘಂಟೆಗೆ ಗಾಂಧಿ ಬಜಾರಿನ ಜಪ್ಪರದಲ್ಲಿ ಬಹಿರಂಗ ಸಭೆ. ಶ್ರೀ ಡಿ. ವಿ. ಗುಂಡಪ್ಪ ಮತ್ತು ಪಿ. ಆರ್. ರಾಮಯ್ಯನವರು ಭಾಷಣ ಮಾಡುವರು.

ಬಹಿರಂಗ ಸಭೆ ಶ್ರೀ ಕೆ.ಟಿ. ಭಾಷ್ಯಂ ಮತ್ತಿತರ ಕಾಂಗ್ರೆಸ್ ಮುಖಂಡರಭಾಷಣ.

: ಪ್ರತಿ ಮನೆಗಳಲ್ಲಿಯೂ ಆಚರಿಸಬೇಕಾದ ಕಾರ್ಯಕ್ರಮ :

೧೪-೮-೪೭ ರ ರಾತ್ರಿ ೧೦ ಘಂಟೆಗೆ ವಿಶೇಷ ಪೂಜಾಕ್ರಮ.

೧೫-೮-೪೭ ರ ಬೆಳಿಗ್ಗೆ ರಂಗವಲ್ಲಿ ತಳಿರು, ತೋರಣಗಳಿಂದ ಅಲಂಕಾರ.

೧೫-೮-೪೭ ೧೬-೮-೪೭ರ ರಾತ್ರಿ, ಸಂಜೆ ಎಲ್ಲಾ ಮನೆಗಳಲ್ಲಿಯೂ ದೀಪಾಲಂಕಾರ.

ಕೊನೆಯದಾಗಿ ಈ ಮಹಾ ಕಾರ್ಯದಲ್ಲಿ ಬಸವನಗುಡಿಯ ಪ್ರತಿಯೊಬ್ಬ ಪ್ರಜೆಯೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ಸರ್ವರಿಗೂ ಪ್ರಾರ್ಥನೆ.

ಗಾಂಧಿ ಸೇವಾ ಸಮಿತಿ. ಯುವಕ ಸಂಘ, ಅನೇ ವಾರ್ಡ್ ಕಾಂ. ಸಮಿತಿ.

ಚಂಪಾ ಆಂಡ್ ಕೋ., ಬಿ.ಸಿ.ಟಿ.

'ಭಾರತದ ರಾಷ್ಟ್ರೀಯ ಧ್ವಜಕ್ಕೆ ನಮ್ಮ ವಂದನೆಗಳು'!

ಆಗಸ್ಟ್ ಹದಿನೈದನೆಯ ದಿನವನ್ನಾಚರಿಸಿ!

ಮುಂಬರುವ ಕರ್ತವ್ಯಗಳನ್ನು ನಿರ್ವಹಿಸಲು ಸಿದ್ಧರಾಗಿ!!

ಭಾರತೀಯರ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಆಗಸ್ಟ್ ೧೫ನೆಯ ತಾರೀಖು ಮಹತ್ವ ಪೂರ್ಣ ದಿನ. ಆ ದಿನದ ಸಂತೋಷಕ್ಕೆ ದುಡಿದು ತಮ್ಮ ಬಲಿದಾನದಿಂದ ದಾರಿಮಾಡಿ ಕೊಟ್ಟ ಸ್ವಾತಂತ್ರ್ಯ ಚಳುವಳಿಯ ಮೂರು ತಲೆಮಾರಿನ ಲೆಕ್ಕವಿಲ್ಲದ ಸಂಖ್ಯೆಯ ಹುತಾತ್ಮರನ್ನು ನಾವು ಗೌರವದಿಂದ ಮತ್ತು ಕೃತಜ್ಞತೆಯಿಂದ ಸ್ಮರಣೆ ಮಾಡಿಕೊಳ್ಳಬೇಕು.

ಕೂಲಿಗಾರ ವರ್ಗಕ್ಕೆ ಆಗಸ್ಟ್ ೧೫ ಹೆಚ್ಚು ಪ್ರಾಮುಖ್ಯತೆ ಇರುವ ದಿನ. ಏಕೆಂದರೆ ತಮ್ಮ ತ್ಯಾಗ ಮತ್ತು ರಕ್ತದ ಕಲ್ಲೋಲದಿಂದ ಸಾಮ್ರಾಜ್ಯಶಾಹಿ ವಿಧಿಸಿದ ಕ್ರೂರ ಶಿಕ್ಷೆಯ ಎದುರು ಪ್ರತಿಭಟನೆ ನಡೆಸಿದಂದಿನಿಂದ, ಗುಪ್ತ-ಶಿಬಿರಗಳ ಚಳುವಳಿಗಳಲ್ಲಿ ಭಾಗವಹಿಸಿ, ಯುದ್ಧಾನಂತರ ಪ್ರಚಂಡ ಮುಷ್ಕರಗಳನ್ನು ನಡೆಸಿ, ನಾವಿಕರ ದಂಗೆಯಲ್ಲಿ ಶಿಖರವಾಗಿ ಕೊನೆಗೊಂಡಿರುವವರೆಗೆ, ನಾವು ನಡೆಸಿದ ಹೋರಾಟ ಬ್ರಿಟಿಷ್ ಸಾಮ್ರಾಜ್ಯದ ಬುಡವನ್ನೇ ಅದುರಿಸಿ, ರಾಷ್ಟ್ರೀಯ ಮುಖಂಡರೊಂದಿಗೆ ಬ್ರಿಟಿಷರು ಒಪ್ಪಂದಕ್ಕೆ ಬರುವಂತೆ ಮಾಡಿದವು.

ಆದರೆ ಸಂಪೂರ್ಣ ಸ್ವಾತಂತ್ರ್ಯವಿನ್ನೂ ನಮಗೆ ಬಂದಿಲ್ಲ. ಬ್ರಿಟಿಷರು ಅಧಿಕಾರ ಬಿಟ್ಟು ಕೊಡ್ತುತ್ತೇವೆಂದು ಬಲವಂತದಿಂದ ವಾಗ್ದಾನ ಮಾಡಿದ್ದರೂ, ನಮ್ಮ ದೇಶವನ್ನು ಇಬ್ಭಾಗ ಮಾಡಿ, ಕೋಮುವಾರು ದ್ವೇಷ ಹೆಚ್ಚಾಗಿ ಬೆಳೆಯುವ ಹಾಗೆ ಮಾಡಿ, ಕೈಯಾಳುಗಳಾದ ಅರಸರಿಗೆ ಪ್ರೋತ್ಸಾಹ ಕೊಟ್ಟು, ಬಂಡವಾಳಗಾರರೊಡನೆ ಒಪ್ಪಂದಕ್ಕೆ ಬಂದು, ಭಾರತದ ಆರ್ಥಿಕ, ಮತ್ತು ರಾಜಕೀಯ ಜೀವನದ ಮೇಲೆ ತಮ್ಮ ಹಿಡಿತವನ್ನುಳಿಸಿಕೊಳ್ಳಲು ಪ್ರಯತ್ನಪಡುತ್ತಿದ್ದಾರೆ. ಆಗಸ್ಟ್ ೧೫ರ ಪವಿತ್ರದಿನ ಕೂಲಿಗಾರರೆಲ್ಲರೂ ಬ್ರಿಟಿಷರ ಈ ಹೊಸ ಆಟವನ್ನು ತಿಳಿದುಕೊಳ್ಳಬೇಕು; ಈ ಆಟವು ನಡೆಯದಂತೆ ನೋಡಿಕೊಳ್ಳಲು ಎಲ್ಲವನ್ನೂ ಐಕ್ಯತೆಯನ್ನು ಸಾಧಿಸಬೇಕು. ಸಾಧಿಸಲು ಶಕ್ಯರಿದ್ದೇವೆಂದು ನಮಗೆ ಪೂರ್ಣ ನಂಬಿಕೆಯಿದೆ. ಭರವಸೆಯಿದೆ.

ಮೈಸೂರು ಸಂಸ್ಥಾನದ ಕೂಲಿಗಾರ ವರ್ಗದ ಮೇಲೆ ಹಿರಿಯ ಜವಾಬ್ದಾರಿ ಬಿದ್ದಿದೆ. ನಾವಿನ್ನೂ ದಾಸ್ಯದಲ್ಲಿದ್ದೇವೆ. ಬಡ್ಡಕ್ಷನ್ ಪ್ಲಿರಂಶುಶಾಧಿಕಾರ ತಾಂಡವವಾಡುತ್ತಿದೆ. ಕಾರ್ಮಿಕ ಸಂಘಗಳ ಬೆಳವಣಿಗೆಯಿರಲಿ, ನಾಗರಿಕ ಹಕ್ಕುಬಾಧ್ಯತೆಗಳು ಕೂಡ ಇಲ್ಲ. ಜನತೆಗೆ ಆಹಾರ ಬಟ್ಟೆಗಳನ್ನೊದಗಿಸುವುದಕ್ಕೂ ಈ ಸರ್ಕಾರಕ್ಕೆ ಶಕ್ತಿಯಿಲ್ಲ. ಇವೆಲ್ಲ ಹೋಗಬೇಕಾದಲ್ಲಿ ಅಧಿಕಾರ ಜನತೆಯ ಕೈಗೆ ಬರಬೇಕು. ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕು. ಹಾಗೂ ಕೂಲಿಗಾರರು ಜನತೆಗಾಗಿ ದುಡಿಯುತ್ತಿರುವರೆಂದು ತಿಳಿದು, ಅವರ ಕೇಳಿಕೆಗಳು ಮಾನ್ಯ ಮಾಡಲ್ಪಟ್ಟಲ್ಲಿ, ಉತ್ಪತ್ತಿ ಹೆಚ್ಚಾಗುವುದರಲ್ಲಿ ಅಲ್ಪವೂ ಸಂದೇಹವಿಲ್ಲ. ಕಾರ್ಮಿಕರಾದ ನಾವು ಈ ಪವಿತ್ರ ಜವಾ

ಬ್ಹಾರಿ ಸರ್ಕಾರದ ಹೋರಾಟಕ್ಕೆ ಪೂರ್ಣ ಬೆಂಬಲ ನೀಡುತ್ತೇವೆ. ಈ ಸಮಯದಲ್ಲಿ ನಾವು ಕೇಳುವುದೇನೆಂದರೆ:—

* ಕೂಲಿಗಾರ ಮತ್ತು ರಾಜಕೀಯ ಮುಖಂಡರುಗಳ ಮೇಲಿರುವ ಗಡೀಪಾರು ಆಜ್ಞೆಗಳೆಲ್ಲಾ ರದ್ದಾಗಬೇಕು.
* ಶ್ರೀ ಹನುಮಂತಯ್ಯನವರ, ಈಸೂರು ಶ್ರವಣಬೆಳಗೊಳದ ಬಂದಿಗಳ ಮತ್ತು ಈಗಕಾನ್ ಪಿಪ್ಲೈಗೊಳಗಾಗಿರುವ ಕೋಲಾರ ಚಿನ್ನದಗಣಿಯ ಕೂಲಿಗಾರರ ಬಿಡುಗಡೆಯಾಗಬೇಕು.
* ಕೂಲಿಗಾರರ ಚಳುವಳಿ ನಡೆಯಲು ಬೇಕಾದ ಹಕ್ಕುಗಳು, ಸ್ವಾತಂತ್ರ್ಯಗಳು ದೊರಕಬೇಕು.
* ರ್ಗಳಿಂದ ಎಲ್ಲಾ ಮಿಲ್ಲುಗಳಲ್ಲೂ ವಜಾಮಾಡಲ್ಪಟ್ಟ ಕೂಲಿಗಾರರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕು.
* ಬಟ್ಟೆಯ ಕೈಗಾರಿಕೆಯನ್ನು ಸರ್ಕಾರವೇ ನಡೆಸಬೇಕು.
* ಮುಷ್ಕರಗಳು ಕಡಿಮೆಯಾಗಿ, ಉತ್ಪತ್ತಿ ಹೆಚ್ಚಲು, ಕೂಲಿಗಾರರ ಕನಿಷ್ಟ ಬೇಡಿಕೆಗಳಾದ, ಸಂಬಳ, ತುಟ್ಟಿಭತ್ಯ, ಬೋನಸ್ ಇವೆಲ್ಲವನ್ನೂ ನೆರವೇರಿಸಬೇಕು.
* ಕಾಳಸಂತೆಯನ್ನು ನಿಲ್ಲಿಸಲು ಪರಿಣಾಮಕಾರಿಯಾದ ಕಾರ್ಯಕ್ರಮ ಕೈಗೊಳ್ಳಬೇಕು.

ಭಾರತದ ಪ್ರಮುಖ ಸಂಸ್ಥೆಯಾದ ಕಾಂಗ್ರೆಸ್ ಅಗಸ್ಟ್ ಕ್ರಾಂತಿ ಆಚರಣೆಯನ್ನು ವಿಜೃಂಭಣೆಯಿಂದ ನೆರವೇರಿಸುವುದು. ಬೆಂಗಳೂರಿನ ಕೆಲಸಗಾರರೆಲ್ಲರೂ ಈ ಸಮಾರಂಭದಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ. ತಮ್ಮ ಮನೆಗಳ ಮೇಲೆ ರಾಷ್ಟ್ರೀಯ ಧ್ವಜವನ್ನು ಹಾರಿಸಬೇಕೆಂದು ಮತ್ತು ಸಂಘದ ಪರವಾಗಿ ನಡೆಯುವ ಸಭೆ ಮತ್ತು ಮೆರವಣಿಗೆಗಳಲ್ಲಿ ಭಾಗವಹಿಸಬೇಕೆಂದು ಪ್ರಾರ್ಥಿಸುತ್ತೇವೆ.

ರಾಷ್ಟ್ರೀಯ ಧ್ವಜ ಚಿರಾಯುವಾಗಿ ಬಾಳಲಿ!

ಕೆಂಪುಬಾವುಟ ಶಾಶ್ವತವಾಗಿರಲಿ!!

ಇಂಕಿಲಾಬ್ ಜಿಂದಾಬಾದ್

ಬೆಂಗಳೂರು ನಗರ.
೭-೮-೪೭.

ಎಂ. ಸಿ. ನರಸಿಂಹ.
ಅಧ್ಯಕ್ಷ.
ಮೈಸೂರು ಮಿಲ್ಸ್ ಕೆಲಸಗಾರರ ಸಂಘ.

ಚಂಪಾ ಆಂಡ್ ಕೋ., ಅರಳೇಪೇಟೆ, ಬೆಂಗಳೂರು ನಗರ.

ಅಖಿಲ ಮೈಸೂರು ವಿದ್ಯಾರ್ಥಿ ಫೆಡರೇಷನ್

ಸ್ವಾತಂತ್ರ್ಯ ದಿನಾಚರಣೆ

ರಾಷ್ಟ್ರಧ್ವಜಕ್ಕೆ ಜಯವಾಗಲಿ

ಆಗಸ್ಟ್ ೧೫ ರಂದು ಭಾರತದಲ್ಲಿ ಐತಿಹಾಸಿಕ ದಿನ; ಶತಮಾನಗಳಿಂದಲೂ, ಹಾರಾಡುತ್ತಿದ್ದ ಪರಕೀಯ ಧ್ವಜವನ್ನು ಕಿತ್ತೊಗೆದು ಆ ಧ್ವಜದೆಡೆ ರಾಷ್ಟ್ರಧ್ವಜ ಹಾರಾಡಲು ಆರಂಭವಾಗುವ ಹೆಮ್ಮೆಯ ದಿನ. ಭಾರತಾದ್ಯಂತದ ಜನತೆ ಕನ್ನ ಹೋರಾಟ ಪರಿಪಕ್ವವಾಗಿ, ಸ್ವಾತಂತ್ರ ಸಂಗ್ರಾಮದ ಅತಿಮುಖ್ಯವಾದ ಘಟ್ಟವನ್ನು ಜಯಪ್ರದವಾಗಿ ಮುಟ್ಟಿದ ದಿನ.

ಭಾರತ ಸ್ವತಂತ್ರವೆಂದು ಸಾರಲ್ಪಡುತ್ತಿರಲು ಆಗಸ್ಟ್ ೧೫ರಂದು, ಅರ್ಧ ಶತಮಾನದಿಂದ ದೇಶಕ್ಕೆ ಬಲಿದಾನವಾದ ಅಸಂಖ್ಯಾತ ಹುತಾತ್ಮರು ನಮ್ಮ ನೆನಪಿಗೆ ಸುಳಿಯುತ್ತಾರೆ. ಎಚ್ಚೆತ್ತ ಭಾರತ ಹೋರಾಟೋನ್ಮುಖವಾಗಿ ಪರಕೀಯ ಆಡಳಿತವನ್ನು ಕೊನೆಗಾಣಿಸುವ ಪವಿತ್ರ ಧ್ಯೇಯದಿಂದ ಮುನ್ನಡೆದಿರುವುದು ನೆನಪಿಗೆ ಬರುತ್ತದೆ. ಹುತಾತ್ಮರಿಗೆ ನಮ್ಮ ಗೌರವಪೂರ್ವಕವಾದ ವಂದನೆಗಳು; ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಪ್ರತಿಯೋಧನಿಗೂ, ನಮ್ಮ ಸ್ವಾತಂತ್ರ ದಿನಾಚರಣೆಯ ಸ್ವಾಗತ.

ಆಗಸ್ಟ್ ೧೫ರಿಂದ ದೇಶದಲ್ಲಿ ಹೊಸ ಶಕೆಯೊಂದು ಆರಂಭವಾಗಲಿದೆ. ಕಳೆದ ಶತಮಾನದಿಂದ ಜನತೆಯನ್ನು ತುಳಿದಿಟ್ಟು ದಬ್ಬಾಳಿಕೆ ನಡೆಸಿದ ಪರಕೀಯ ಸಾಮ್ರಾಜ್ಯಶಾಹೀ ಸರಕಾರದ ಬದಲು ದೇಶದ ರಾಷ್ಟ್ರೀಯ ನಾಯಕರಿಂದ ಕೂಡಿದ ಸರಕಾರ ದೆಹಲಿಯಲ್ಲಿ ಕೂಡಲಿದೆ. ಪರಕೀಯ ಆಡಳಿತದ ದುರ್ನೀತಿಯ ದಿನ ಕಳೆದು ಸ್ವರಾಜ್ಯದ ಶಕೆಯು ಆರಂಭವಾಗುತ್ತದೆ.

ಭಾರತವನ್ನು ಹಿಂದಿನಂತೆ ಆಳಲು ದಾರಿಕಾಣದ ಸಾಮ್ರಾಜ್ಯ ಶಾಹಿಗಳು ಭಾರತದ ಸ್ವಾತಂತ್ರವನ್ನೊಪ್ಪಿದ್ದಾರೆ; ಇದು ಜನತೆಯ ಅಪಾರ ತ್ಯಾಗದ ಫಲ, ನಮ್ಮ ಹೋರಾಟದ ಶಕ್ತಿಯ ಅಳತೆ, ಹಾಗೂ ಅಂತರ ರಾಷ್ಟ್ರೀಯ ಸಾಮ್ರಾಜ್ಯ ಶಕ್ತಿಯ ದುರ್ಬಲತೆ, ಇಷ್ಟಕ್ಕೆ ಸೋಲನೊಪ್ಪಿಕೊಳ್ಳದೆ ಸಾಮ್ರಾಜ್ಯವಾದಿಗಳು ಮುಸುಕಿನ ಗುದ್ದಾಟ ಆರಂಭ ಮಾಡಿದ್ದಾರೆ. ದೇಶವನ್ನು ಇಬ್ಭಾಗಮಾಡಿ, ಇಬ್ಬರಿಗೂ ಎಂದೂ ಕೊನೆಗಾಣದ್ದ ಕಾಳಗವನ್ನು ತಂದೊಡ್ಡಿ, ತನ್ಮೂಲಕ ತಮ್ಮ ಆಡಳಿತವನ್ನು ಇನ್ನೂ ನೆಡ್ಡೆಸ್ಪಬೇಕೆಂಬುದು ಅವರ ಪ್ರಯತ್ನ; ತಮ್ಮ ಕೈಗೊಂಬೆಗಳಾದ ಸಂಸ್ಥಾನಾಧೀಶ್ವರರನ್ನು ಹೇಗಾದರೂ ಕಾಪಾಡಿ, ಭಾರತದಲ್ಲಿ ತಮ್ಮ ಆರ್ಥಿಕ ಮತ್ತು ಮಿಲಿಟರಿ ಪ್ರದೇಶಗಳನ್ನು ನಿರ್ಮಾಣ ಮಾಡಬೇಕೆಂದು ಅವರ ಕುಹಕ ಯತ್ನ. ಸಾಮ್ರಾಜ್ಯ ಶಾಹಿಯು ಜನತೆಯನ್ನು ಛಿದ್ರ ಛಿದ್ರ ಮಾಡಿ ಹೊಸರೀತಿಯಲ್ಲಿ ಆಡಳಿತ ನಡೆಸುವ ಯೋಜನೆಯಲ್ಲಿ ತೊಡಗಿದೆ. ಆದರೆ ಸ್ವಾತಂತ್ರ ಸಂಗ್ರಾಮದಲ್ಲಿ ನುರಿತಿರುವ ಭಾರತದ ಜನತೆ ಇದಕ್ಕೆ ಎಡೆಕೊಡಲಾರರು; ಸಾಮ್ರಾಜ್ಯ ಶಾಹಿಗಳು ಈ ಗುದ್ದಾಟವನ್ನು ಮುಸುಕಿನಲ್ಲೇ ಮಣ್ಣು ಮಾಡಬೇಕು.

ಆಗಸ್ಟ್ ೧೫ ಬಂದರೂ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಿಲ್ಲ; ಬದಲು ಹೆಚ್ಚಿನ ದಬ್ಬಾಳಿಕೆ ಆರಂಭವಾಗಿದೆ. ಜನತೆ ಮತ್ತು ವಿದ್ಯಾರ್ಥಿಗಳನ್ನು ಕೋಮುವಾರು ಪಿಶಾಚಿಗಳ ಪಾಲಕ್ಕೆ ಬಿಗಿದು

P. T. O.

ಜವಾಬ್ದಾರಿ ಸರ್ಕಾರದ ಹೋರಾಟದ ಅಂತಿಮ ಕ್ರಿಯೆಯನ್ನು ಮಾಡಲು ರಾಮಸ್ವಾಮಿ ಮೊದಲಿಯಾರರು ಕಂಕಣ ತೊಟ್ಟು ಸಂಸ್ಥಾನಕ್ಕೆ ದಿವಾನರಾಗಿ ಬಂದರು. ಭಾರತದ ಜನತೆಯ ಸ್ಫೂರ್ತಿ ಮೈಸೂರು ಜನತೆಯಲ್ಲೂ ಇದೆ; ಹೋರಾಟೋನ್ಮುಖರಾಗಿ ಜವಾಬ್ದಾರಿ ಸರ್ಕಾರ ಸ್ಥಾಪನೆ ಮಾಡಬೇಕು.

ಭಾರತದ ಎಲ್ಲೆಡೆಯಲ್ಲೂ ಸ್ವಾತಂತ್ರ್ಯ ಪತಾಕೆ ಹಾರಾಡುವುದು ನಮ್ಮೆಲ್ಲರ ಸೌಭಾಗ್ಯ; ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವಿಲ್ಲದೆ ನಿರಂಕುಶಾಧಿಕಾರದ ಆಡಳಿತವಿರುವುದು ದೌರ್ಭಾಗ್ಯ; ಈ ನಿರಂಕುಶತೆಯ ವಿರುದ್ಧ ಜನತೆಯ ಎಲ್ಲ ಶಕ್ತಿಯನ್ನು ಒಂದುಗೂಡಿಸುತ್ತೇವೆಂದು ಪ್ರತಿಜ್ಞೆ ಮಾಡೋಣ.

ಭಾರತ ಸ್ವಾತಂತ್ರ್ಯವಾಗುವ ಆಗಸ್ಟ್ ೧೫ರಿಂದ ಸಂಸ್ಥಾನದ ವಿದ್ಯಾರ್ಥಿಗಳಾದ ನಮ್ಮ ಹೊಣೆಗಾರ್ಮಿಕತೆಯಾಗುವುದು. ಶಿಕ್ಷಣ ಪದ್ಧತಿ ಸರಿಯಿಲ್ಲದೆ ವಿದ್ಯಾರ್ಥಿಗಳು ಕೊಳೆಯುತ್ತಿರುವುದು ಕೊನೆಗಾಣಬೇಕು; ವಿಶ್ವವಿದ್ಯಾನಿಲಯ ದಬ್ಬಾಳಿಕೆಯ ಸಂಸ್ಥೆಯಾಗಿರುವುದು ನಿಂತು ಪ್ರಜಾಸತ್ತಾತ್ಮಕ ಸಂಸ್ಥೆಯಾಗಬೇಕು. ಅಂತೆಯೇ ವಿದ್ಯಾರ್ಥಿಗಣ ಜವಾಬ್ದಾರಿ ಸರ್ಕಾರ ಹೋರಾಟದ ಮುಂದಳದ ಯೋಧರಾಗಬೇಕು.

ಭಾರತದ ಎಲ್ಲೆಡೆಯಲ್ಲೂ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡುತ್ತಿರುವಾಗ ಸಂಸ್ಥಾನದಲ್ಲಿ ಜನಪ್ರಿಯ ನಾಯಕರಾದ ಶ್ರೀ ಹಕ್ಕುಮಂತಯ್ಯನವರು ಸೆರೆಮನೆಯಲ್ಲಿ ಕೊಳೆಯುತ್ತಿದ್ದಾರೆ. ಈ ಸೂರು—ಶ್ರವಣಬೆಳಗೊಳದ ಸ್ವಾತಂತ್ರ್ಯವೀರರು ಸ್ವಾತಂತ್ರ್ಯದ ಬೆಳಕನ್ನು ಸೋಡಲಾರರು; ಸಂಸ್ಥಾನದ ಕಾರ್ಮಿಕ ಮುಖಂಡರ ಮೇಲೆ ಎಸೆದಿರುವ ಗಡೀಪಾರಾಜ್ಞೆಯನ್ನು ಪಾಪಸ್ ತೆಗೆದುಕೊಂಡಿಲ್ಲ. ಬದಲು ತಮ್ಮ ಹಕ್ಕಿಗಾಗಿ ಹೋರಾಡಿದ ಚಿನ್ನದ ಗಣಿ ಕಾರ್ಮಿಕ ನಾಯಕರು ಅಮಾನುಷ ಶಿಕ್ಷೆಗೆ ಗುರಿಮಾಡಲ್ಪಟ್ಟಿದ್ದಾರೆ. ವಿಶ್ವವಿದ್ಯಾನಿಲಯದ ಸರ್ವಾಧಿಕಾರಿ ಆಡಳಿತಗಾರರು ಎಂಟು ವಿದ್ಯಾರ್ಥಿಗಳನ್ನು ಕಾಲೇಜುಗಳಿಂದ ಹೊರದೂಡಿದ್ದಾರೆ. ಸಂಸ್ಥಾನದ ಈ ಪರಿಸ್ಥಿತಿ ಬದಲಾಗಬೇಕು. ಬದಲಾಗಲು ಜವಾಬ್ದಾರಿ ಪ್ರಜಾಸರ್ಕಾರ ಸ್ಥಾಪನೆಯೇ ಸಂಜೀವಿನಿ.

ಪರಿಸ್ಥಿತಿ ಹದಗೆಡುವಂತೆ ವಿದ್ಯಾರ್ಥಿವೃಂದ ಬಿಡಬಾರದು. ಕೋಮುವಾರು ವಿಷಜ್ವಾಲೆ, ವಿದ್ಯಾರ್ಥಿಗಳನ್ನು ದಹಿಸುವುದೇ ವಿನಃ ನಿರಂಕುಶಾಧಿಕಾರಿಗಳಿಗೆ ತಾಕಲಾರದು. ವಿದ್ಯಾರ್ಥಿವೃಂದ ಭಾರತದ ಎಲ್ಲೆಡೆಯಲ್ಲೂ ಐಕ್ಯವಾಗುತ್ತಿರುವಂತೆ ನಮ್ಮ ಸಂಸ್ಥಾನದಲ್ಲೂ ಐಕ್ಯರಂಗ ರಚಿತವಾಗಬೇಕು. ಕೆಲವು ದಿನದಿಂದ ಬೆಳೆದು ಬರುತ್ತಿರುವ ಐಕ್ಯಮನೋಭಾವನೆಯನ್ನು ಮುಂದೆ ತರಬೇಕು:

ವಿದ್ಯಾರ್ಥಿಗಳ ಹಕ್ಕು ಬಾಧ್ಯತೆಗಳ ರಕ್ಷಣೆಗಾಗಿಯೂ ಮತ್ತು ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ಹೆಮ್ಮೆಯ ಪಾತ್ರ ವಹಿಸಲು ವಿದ್ಯಾರ್ಥಿಗಳನ್ನು ಸಂಘಟಿಸುವುದಕ್ಕಾಗಿಯೂ ವಿದ್ಯಾರ್ಥಿ ಫೆಡರೇಷನ್ ಸತತ ದುಡಿಯುತ್ತಿದೆ.

ಈ ಆಗಸ್ಟ್ ೧೫ರಂದು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗುವವರೆಗೂ ಶಾಂತಿಯಿಂದ ಕೂಡುವುದಿಲ್ಲವೆಂದು ಪಣ ತೊಡೋಣ. ಸ್ವತಂತ್ರ ಸಂಯುಕ್ತ ಕರ್ನಾಟಕದೆಡೆಗೆ ಮುನ್ನಡೆಯೋಣ.

ಬ್ರಿಟಿಷರ ಕುಹಕ ತಂತ್ರಗಳು ಕಾಡುಪಾಲಾಗಲಿ!
ನಿರಂಕುಶಾಧಿಕಾರ ನಿರ್ನಾಮವಾಗಿ ಜವಾಬ್ದಾರಿ
ಸರ್ಕಾರ ಸ್ಥಾಪನೆಯಾಗಲಿ!!
ವಿದ್ಯಾರ್ಥಿಗಳ ಶಿಕ್ಷಣ ಜೀವನ ಸುಗಮವಾಗಲಿ!!!

ಚಂಪಾ ಆಂಡ್ ಕೋ., ಬೆಂಗಳೂರು ನಗರ.

ಅಖಿಲ ಮೈಸೂರು ವಿದ್ಯಾರ್ಥಿ ಫೆಡರೇಷನ್

ಸ್ವಾತಂತ್ರ್ಯ ದಿನಾಚರಣೆ

ರಾಷ್ಟ್ರಧ್ವಜಕ್ಕೆ ಜಯವಾಗಲಿ

ಆಗಸ್ಟ್ ೧೫ ರಂದು ಭಾರತದಲ್ಲಿ ಐತಿಹಾಸಿಕ ದಿನ; ಶತಮಾನಗಳಿಂದಲೂ, ಹಾರಾಡುತ್ತಿದ್ದ ಪರಕೀಯ ಧ್ವಜವನ್ನು ಕಿತ್ತೊಗೆದು ಆ ಧ್ವಜದೆಡೆ ರಾಷ್ಟ್ರಧ್ವಜ ಹಾರಾಡಲು ಆರಂಭವಾಗುವ ಹೆಮ್ಮೆಯ ದಿನ. ಭಾರತಾದ್ಯಂತದ ಜನತೆ ಕನ್ನ ಹೋರಾಟ ಪರಿಪಕ್ವವಾಗಿ, ಸ್ವಾತಂತ್ರ ಸಂಗ್ರಾಮದ ಅತಿಮುಖ್ಯವಾದ ಘಟ್ಟವನ್ನು ಜಯಪ್ರದವಾಗಿ ಮುಟ್ಟಿದ ದಿನ.

ಭಾರತ ಸ್ವತಂತ್ರವೆಂದು ಸಾರಲ್ಪಡುತ್ತಿರಲು ಆಗಸ್ಟ್ ೧೫ರಂದು, ಅರ್ಧ ಶತಮಾನದಿಂದ ದೇಶಕ್ಕೆ ಬಲಿದಾನವಾದ ಅಸಂಖ್ಯಾತ ಹುತಾತ್ಮರು ನಮ್ಮ ನೆನಪಿಗೆ ಸುಳಿಯುತ್ತಾರೆ. ಎಚ್ಚೆತ್ತ ಭಾರತ ಹೋರಾಟೋನ್ಮುಖವಾಗಿ ಪರಕೀಯ ಆಡಳಿತವನ್ನು ಕೊನೆಗಾಣಿಸುವ ಪವಿತ್ರ ಧ್ಯೇಯದಿಂದ ಮುನ್ನಡೆದಿರುವುದು ನೆನಪಿಗೆ ಬರುತ್ತದೆ. ಹುತಾತ್ಮರಿಗೆ ನಮ್ಮ ಗೌರವಪೂರ್ವಕವಾದ ವಂದನೆಗಳು; ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಪ್ರತಿಯೋಧನಿಗೂ, ನಮ್ಮ ಸ್ವಾತಂತ್ರ ದಿನಾಚರಣೆಯ ಸ್ವಾಗತ.

ಆಗಸ್ಟ್ ೧೫ರಿಂದ ದೇಶದಲ್ಲಿ ಹೊಸ ಶಕೆಯೊಂದು ಆರಂಭವಾಗಲಿದೆ. ಕಳೆದ ಶತಮಾನದಿಂದ ಜನತೆಯನ್ನು ತುಳಿದಿಟ್ಟು ದಬ್ಬಾಳಿಕೆ ನಡೆಸಿದ ಪರಕೀಯ ಸಾಮ್ರಾಜ್ಯಶಾಹೀ ಸರಕಾರದ ಬದಲು ದೇಶದ ರಾಷ್ಟ್ರೀಯ ನಾಯಕರಿಂದ ಕೂಡಿದ ಸರಕಾರ ದೆಹಲಿಯಲ್ಲಿ ಕೂಡಲಿದೆ. ಪರಕೀಯ ಆಡಳಿತದ ದುರ್ಗತಿಯ ದಿನ ಕಳೆದು ಸ್ವರಾಜ್ಯದ ಶಕೆಯು ಆರಂಭವಾಗುತ್ತದೆ.

ಭಾರತವನ್ನು ಹಿಂದಿನಂತೆ ಆಳಲು ದಾರಿಕಾಣದ ಸಾಮ್ರಾಜ್ಯ ಶಾಹಿಗಳು ಭಾರತದ ಸ್ವಾತಂತ್ರವನ್ನೊಪ್ಪಿದ್ದಾರೆ; ಇದು ಜನತೆಯ ಅಪಾರ ತ್ಯಾಗದ ಫಲ, ನಮ್ಮ ಹೋರಾಟದ ಶಕ್ತಿಯ ಅಳತೆ, ಹಾಗೂ ಆಂತರ ರಾಷ್ಟ್ರೀಯ ಸಾಮ್ರಾಜ್ಯ ತತ್ವದ ದುರ್ಬಲತೆ, ಇಷ್ಟಕ್ಕೆ ಸೋಲನೊಪ್ಪಿಕೊಳ್ಳದೆ ಸಾಮ್ರಾಜ್ಯವಾದಿಗಳು ಮುಸುಕಿನ ಗುದ್ದಾಟ ಆರಂಭ ಮಾಡಿದ್ದಾರೆ. ದೇಶವನ್ನು ಇಬ್ಭಾಗಮಾಡಿ, ಇಬ್ಬರಿಗೂ ಎಂದೂ ಕೊನೆಗಾಣದ ಕಾಳಗವನ್ನು ತಂದೊಡ್ಡಿ; ತನ್ಮೂಲಕ ತಮ್ಮ ಆಡಳಿತವನ್ನು ಇನ್ನೂ ನಡೆಸಬೇಕೆಂಬುದು ಅವರ ಪ್ರಯತ್ನ; ತಮ್ಮ ಕೈಗೊಂಬೆಗಳಾದ ಸಂಸ್ಥಾನಾಧೀಶ್ವರರನ್ನು ಹೇಗಾದರೂ ಕಾಪಾಡಿ, ಭಾರತದಲ್ಲಿ ತಮ್ಮ ಆರ್ಥಿಕ ಮತ್ತು ಮಿಲಿಟರಿ ಪ್ರದೇಶಗಳನ್ನು ನಿರ್ಮಾಣ ಮಾಡಬೇಕೆಂದು ಅವರ ಕುಹಕ ಯತ್ನ. ಸಾಮ್ರಾಜ್ಯ ಶಾಹಿಯು ಜನತೆಯನ್ನು ಛಿದ್ರ ಛಿದ್ರ ಮಾಡಿ ಹೊಸರೀತಿಯಲ್ಲಿ ಆಡಳಿತ ನಡೆಸುವ ಯೋಜನೆಯಲ್ಲಿ ತೊಡಗಿದೆ. ಆದರೆ ಸ್ವಾತಂತ್ರ ಸಂಗ್ರಾಮದಲ್ಲಿ ನುರಿತಿರುವ ಭಾರತದ ಜನತೆ ಇದಕ್ಕೆ ಎಡೆಕೊಡಲಾರರು; ಸಾಮ್ರಾಜ್ಯ ಶಾಹಿಗಳು ಈ ಗುದ್ದಾಟವನ್ನು ಮುಸುಕಿನಲ್ಲೇ ಮಣ್ಣು ಮಾಡಬೇಕು.

ಆಗಸ್ಟ್ ೧೫ ಬಂದರೂ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಿಲ್ಲ; ಬದಲು ಹೆಚ್ಚಿನ ದಬ್ಬಾಳಿಕೆ ಆರಂಭವಾಗಿದೆ. ಜನತೆ ಮತ್ತು ವಿದ್ಯಾರ್ಥಿಗಳನ್ನು ಕೋಮುವಾರು ಪಿಶಾಚಿಗಳ ಪಾಶಕ್ಕೆ ಬಿಗಿದು

P. T. O.

ಜವಾಬ್ದಾರಿ ಸರ್ಕಾರದ ಹೋರಾಟದ ಅಂತಿಮ ಕ್ರಿಯೆಯನ್ನು ಮಾಡಲು ರಾಮಸ್ವಾಮಿ ಮೊದಲಿಯಾರು ಕಂಕಣ ತೊಟ್ಟು ಸಂಸ್ಥಾನಕ್ಕೆ ದಿವಾನರಾಗಿ ಬಂದರು. ಭಾರತದ ಜನತೆಯ ಸ್ಫೂರ್ತಿ ಮೈಸೂರು ಜನತೆಯಲ್ಲೂ ಇದೆ; ಹೋರಾಟೋನ್ಮುಖರಾಗಿ ಜವಾಬ್ದಾರಿ ಸರ್ಕಾರ ಸ್ಥಾಪನೆ ಮಾಡಬೇಕು.

ಭಾರತದ ಎಲ್ಲೆಡೆಯಲ್ಲೂ ಸ್ವಾತಂತ್ರ್ಯ ಪತಾಕೆ ಹಾರಾಡುವುದು ನಮ್ಮೆಲ್ಲರ ಸೌಭಾಗ್ಯ; ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವಿಲ್ಲದೆ ನಿರಂಕುಶಾಧಿಕಾರದ ಆಡಳಿತವಿರುವುದು ದೌರ್ಭಾಗ್ಯ; ಈ ನಿರಂಕುಶತೆಯ ವಿರುದ್ಧ ಜನತೆಯ ಎಲ್ಲ ಶಕ್ತಿಯನ್ನು ಒಂದುಗೂಡಿಸುತ್ತೇವೆಂದು ಪ್ರತಿಜ್ಞೆ ಮಾಡೋಣ.

ಭಾರತ ಸ್ವಾತಂತ್ರ್ಯವಾಗುವ ಆಗಸ್ಟ್ ೧೫ರಿಂದ ಸಂಸ್ಥಾನದ ವಿದ್ಯಾರ್ಥಿಗಳಾದ ನಮ್ಮ ಹೊಣೆಗಾರ್ಮಿಕತೆಯಾಗುವುದು. ಶಿಕ್ಷಣ ಪದ್ಧತಿ ಸರಿಯಿಲ್ಲದೆ ವಿದ್ಯಾರ್ಥಿಗಳು ಕೊಳೆಯುತ್ತಿರುವುದು ಕೊನೆಗಾಣಬೇಕು; ವಿಶ್ವವಿದ್ಯಾನಿಲಯ ದಬ್ಬಾಳಿಕೆಯ ಸಂಸ್ಥೆಯಾಗಿರುವುದು ನಿಂತು ಪ್ರಜಾಸತ್ತಾತ್ಮಕ ಸಂಸ್ಥೆಯಾಗಬೇಕು. ಅಂತೆಯೇ ವಿದ್ಯಾರ್ಥಿಗಣ ಜವಾಬ್ದಾರಿ ಸರ್ಕಾರದ ಹೋರಾಟದ ಮುಂದಳದ ಯೋಧರಾಗಬೇಕು.

ಭಾರತದ ಎಲ್ಲೆಡೆಯಲ್ಲೂ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡುತ್ತಿರುವಾಗ ಸಂಸ್ಥಾನದಲ್ಲಿ ಜನಪ್ರಿಯ ನಾಯಕರಾದ ಶ್ರೀ ಪಸುಮಂತಯ್ಯನವರು ಸೆರೆಮನೆಯಲ್ಲಿ ಕೊಳೆಯುತ್ತಿದ್ದಾರೆ. ಈ ಸೂರು—ಶ್ರವಣಬೆಳಗೊಳದ ಸ್ವಾತಂತ್ರ್ಯವೀರರು ಸ್ವಾತಂತ್ರ್ಯದ ಬೆಳಕನ್ನು ನೋಡಲಾರರು; ಸಂಸ್ಥಾನದ ಕಾರ್ಮಿಕ ಮುಖಂಡರ ಮೇಲೆ ಎಸೆದಿರುವ ಗಡೀಪಾರಾಜ್ಞೆಯನ್ನು ವಾಪಸ್ ತೆಗೆದುಕೊಂಡಿಲ್ಲ. ಬದಲು ತಮ್ಮ ಹಕ್ಕಿಗಾಗಿ ಹೋರಾಡಿದ ಚಿನ್ನದ ಗಣ ಕಾರ್ಮಿಕ ನಾಯಕರು ಅಮಾನುಷ ಶಿಕ್ಷೆಗೆ ಗುರಿಮಾಡಲ್ಪಟ್ಟಿದ್ದಾರೆ. ವಿಶ್ವವಿದ್ಯಾನಿಲಯದ ಸರ್ವಾಧಿಕಾರಿ ಆವೇಶಿತಗಾರರು ಎಂಟು ವಿದ್ಯಾರ್ಥಿಗಳನ್ನು ಕಾಲೇಜುಗಳಿಂದ ಹೊರದೂಡಿದ್ದಾರೆ. ಸಂಸ್ಥಾನದ ಈ ಪರಿಸ್ಥಿತಿ ಬದಲಾಗಬೇಕು. ಬದಲಾಗಲು ಜವಾಬ್ದಾರಿ ಪ್ರಜಾಸರ್ಕಾರ ಸ್ಥಾಪನೆಯೇ ಸಂಜೀವಿನಿ.

ಪರಿಸ್ಥಿತಿ ಹದಗೆಡುವಂತೆ ವಿದ್ಯಾರ್ಥಿವೃಂದ ಬಿಡಬಾರದು. ಕೋಮುವಾರು ವಿಷಜ್ವಾಲೆ, ವಿದ್ಯಾರ್ಥಿಗಳನ್ನು ದಹಿಸುವುದೇ ವಿನಃ ನಿರಂಕುಶಾಧಿಕಾರಿಗಳಿಗೆ ತಾಕಲಾರದು. ವಿದ್ಯಾರ್ಥಿವೃಂದ ಭಾರತದ ಎಲ್ಲೆಡೆಯಲ್ಲೂ ಐಕ್ಯವಾಗುತ್ತಿರುವಂತೆ ನಮ್ಮ ಸಂಸ್ಥಾನದಲ್ಲೂ ಐಕ್ಯರಂಗ ರಚಿತವಾಗಬೇಕು. ಕೆಲವು ದಿನದಿಂದ ಬೆಳೆದು ಬರುತ್ತಿರುವ ಐಕ್ಯಮನೋಭಾವನೆಯನ್ನ ಮುಂದೆ ತರಬೇಕು.

ವಿದ್ಯಾರ್ಥಿಗಳ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿಯೂ ಮತ್ತು ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ಹೆಮ್ಮೆಯ ಪಾತ್ರ ವಹಿಸಲು ವಿದ್ಯಾರ್ಥಿಗಳನ್ನು ಸಂಘಟಿಸುವುದಕ್ಕಾಗಿಯೂ ವಿದ್ಯಾರ್ಥಿ ಫೆಡರೇಷನ್ ಸತತ ದುಡಿಯುತ್ತಿದೆ.

ಈ ಆಗಸ್ಟ್ ೧೫ರಂದು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗುವವರೆಗೂ ಶಾಂತಿಯಿಂದ ಕೂಡುವುದಿಲ್ಲವೆಂದು ಪಣ ತೊಡೋಣ. ಸ್ವತಂತ್ರ ಸಂಯುಕ್ತ ಕರ್ನಾಟಕದೆಡೆಗೆ ಮುನ್ನಡೆಯೋಣ.

ಬ್ರಿಟಿಷರ ಕುಹಕ ತಂತ್ರಗಳು ಕಾಡುಪಾಲಾಗಲಿ!
ನಿರಂಕುಶಾಧಿಕಾರ ನಿರ್ನಾಮವಾಗಿ ಜವಾಬ್ದಾರಿ
ಸರ್ಕಾರ ಸ್ಥಾಪನೆಯಾಗಲಿ!!
ವಿದ್ಯಾರ್ಥಿಗಳ ಶಿಕ್ಷಣ ಜೀವನ ಸುಗಮವಾಗಲಿ!!!

ಚಂಪಾ ಅಂಡ್ ಕೋ., ಬೆಂಗಳೂರು ನಗರ.

ಭಾರತದ ರಾಷ್ಟ್ರೀಯ ಧ್ವಜಕ್ಕೆ ನಮ್ಮ ವಂದನೆಗಳು!

ಆಗಸ್ಟ್ ೧೫ನೇ ದಿನವನ್ನಾಚರಿಸಿ

ಮುಂಬರುವ ಕರ್ತವ್ಯಗಳನ್ನು ನಿರ್ವಹಿಸಲು ಸಿದ್ಧರಾಗಿ

ಭಾರತೀಯರ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಆಗಸ್ಟ್ ೧೫ನೆಯ ತಾರೀಖು ಮಹತ್ವಪೂರ್ಣ ದಿನ. ಆ ದಿನದ ಸಂತೋಷಕ್ಕೆ ದುಡಿದು ತಮ್ಮ ಬಲಿದಾನದಿಂದ ದಾರಿ ಮಾಡಿಕೊಟ್ಟ ಸ್ವಾತಂತ್ರ್ಯ ಚಳುವಳಿಯ ಮೂರು ತಲೆಮಾರಿನ ಲೆಕ್ಕವಿಲ್ಲದ ಸಂಖ್ಯೆಯ ಹುತಾತ್ಮರನ್ನು ನಾವು ಗೌರವದಿಂದ ಮತ್ತು ಕೃತಜ್ಞತೆಯಿಂದ ಸ್ಮರಣೆ ಮಾಡಿಕೊಳ್ಳಬೇಕು.

ರೈತವರ್ಗಕ್ಕೆ ಆಗಸ್ಟ್ ೧೫ ಹೆಚ್ಚು ಪ್ರಾಮುಖ್ಯತೆ ಇರುವ ದಿನ. "ಏಕೆಂದರೆ ತಮ್ಮ ತ್ಯಾಗದಿಂದ ಸ್ವಾತಂತ್ರ್ಯ ಚಳುವಳಿಯ ಮುನ್ನಡೆಯ ಮುಂದಳವಾಗಿ ನಿಂತಿದ್ದಾರೆ. ೧೯೩೬ರಿಂದ ಸಂಘಟಿತರಾಗಿ ನಾವು ಪ್ರತಿಯೊಂದು ಚಳುವಳಿಯಲ್ಲೂ ಭಾಗವಹಿಸಿರುವುದಲ್ಲದೆ ಯುದ್ಧಾನಂತರ ೧೯೪೬ರಲ್ಲಿ ಜಮೀನುದಾರಿ ಪದ್ಧತಿಯನ್ನು ನಿರ್ಮೂಲ ಮಾಡುವುದಕ್ಕಾಗಿ, ರೈತನು ಹೊಲದೊಡೆಯನೆಂಬ ಹಕ್ಕನ್ನು ಪಡೆಯುವುದಕ್ಕಾಗಿ ಬಂಗಾಳದ ೫೦ ಲಕ್ಷ ರೈತರು ನಡೆಸಿದ ಹೋರಾಟ, ಮಲಬಾರ್, ಆಂಧ್ರ, ತಮಿಳುನಾಡ್ ಮತ್ತು ಕರ್ನಾಟಕದ ಕಾರವಾರ ಕಿಸಾನರು ನಡೆಸಿದ, ಮತ್ತು ನಡೆಸುತ್ತಿರುವ ಹೋರಾಟ, ಬ್ರಿಟಿಷ್ ಸಾಮ್ರಾಜ್ಯದ ಬುಡವನ್ನೇ ಅದುರಿಸಿ ರಾಷ್ಟ್ರೀಯ ಮುಖಂಡರೊಂದಿಗೆ ಒಪ್ಪಂದಕ್ಕೆ ಬರುವಂತೆ ಮಾಡಿದವು.

ಆದರೆ ಸಂಪೂರ್ಣ ಸ್ವಾತಂತ್ರ್ಯವಿನ್ನೂ ನಮಗೆ ಬಂದಿಲ್ಲ. ಬ್ರಿಟಿಷರು ಅಧಿಕಾರ ಬಿಟ್ಟು ಕೊಡುತ್ತೇವೆಂದು ಬಲವಂತದಿಂದ ವಾಗ್ದಾನ ಮಾಡಿದ್ದರೂ, ನಮ್ಮ ದೇಶವನ್ನು ಇಬ್ಭಾಗ ಮಾಡಿ, ಕೋಮುವಾರು ದ್ವೇಷ ಹೆಚ್ಚಾಗಿ ಬೆಳೆಯುವ ಹಾಗೆ ಮಾಡಿ, ಕೈಯಾಳುಗಳಾದ ಅರಸರಿಗೆ ಪ್ರೋತ್ಸಾಹ ಕೊಟ್ಟು, ಬಂಡವಾಳಗಾರರೊಡನೆ ಒಪ್ಪಂದಕ್ಕೆ ಬಂದು, ಭಾರತದ ಆರ್ಥಿಕ, ಮತ್ತು ರಾಜಕೀಯ ಜೀವನದ ಮೇಲೆ ತಮ್ಮ ಹಿಡಿತವನ್ನಿಟ್ಟುಕೊಳ್ಳಲು ಪ್ರಯತ್ನಪಡುತ್ತಿದ್ದಾರೆ. ಆಗಸ್ಟ್ ೧೫ರ ಪವಿತ್ರ ದಿನ ರೈತರೆಲ್ಲರೂ ಬ್ರಿಟಿಷರ ಈ ಹೊಸ ಆಟವನ್ನು ತಿಳಿದುಕೊಳ್ಳಬೇಕು; ಈ ಆಟವು ನಡೆಯದಂತೆ ನೋಡಿಕೊಳ್ಳಲು ಎಲ್ಲರೂ ಐಕ್ಯತೆಯನ್ನು ಸಾಧಿಸಬೇಕು. ಸಾಧಿಸಲು ಶಕ್ಯರಿದ್ದೇವೆಂದು ನಮಗೆ ಪೂರ್ಣ ನಂಬಿಕೆಯಿದೆ, ಭರವಸೆಯಿದೆ.

ಮೈಸೂರು ಸಂಸ್ಥಾನದ ರೈತ ವರ್ಗದ ಮೇಲೆ ಹಿರಿಯ ಜವಾಬ್ದಾರಿ ಇದ್ದಿದೆ. ನಾವಿನ್ನೂ ಪಾರತಂತ್ರ್ಯದಲ್ಲಿದ್ದೇವೆ. ಬಡತನ, ನಿರುದ್ಯೋಗ ತಾಂಡವವಾಡುತ್ತಿದೆ. ರೈತ ಸಂಘಗಳ ಬೆಳವಣಿಗೆಯಿರಲಿ, ನಾಗರಿಕ ಹಕ್ಕುಬಾಧ್ಯತೆಗಳು ಕೂಡ ಇಲ್ಲ. ಜನತೆಗೆ ಆಹಾರ ಬಟ್ಟೆಗಳ ಸ್ಥೈರ್ಯವನ್ನು ಒದಗಿಸುವುದಕ್ಕೂ ಈ ಸರ್ಕಾರಕ್ಕೆ ಶಕ್ತಿಯಿಲ್ಲ. ಇವೆಲ್ಲ ಹೋಗಬೇಕಾದಲ್ಲಿ ಅಧಿಕಾರ ಜನತೆಯ ಕೈಗೆ ಬರಬೇಕು. ಹಾಗೂ ರೈತರು ಜನತೆಗಾಗಿ ದುಡಿದು ಬೆಳೆಯುತ್ತಿದ್ದಾರೆಂದು ತಿಳಿದು ಅವರ ಕೇಳಿಕೆಗಳು ಮಾನ್ಯ ಮಾಡಲ್ಪಟ್ಟಲ್ಲಿ, ಆಹಾರದ ಪೂರಸ ಧಾನ್ಯಗಳ ಬೆಳೆಯು ಉತ್ಪತ್ತಿ ಹೆಚ್ಚಾಗುವುದರಲ್ಲಿ ಅಲ್ಪವೂ ಸಂದೇಹವಿಲ್ಲ. ಈ ದಿನ ರೈತರಾದ ನಾವು ಸಂಘಟಿತರಾಗಿಲ್ಲ. ನಮ್ಮನ್ನು ಅನೇಕ ಪ್ರಶ್ನೆಗಳು ಜಾಗಿಸುತ್ತಿವೆ. ಆಗಸ್ಟ್ ೧೫ರ ದಿನ ರೈತರಾದ ನಾವು ಈ ಪವಿತ್ರ ಜವಾಬ್ದಾರಿ ಸರ್ಕಾರದ ಹೋರಾಟಕ್ಕೆ ಪೂರ್ಣ ಬೆಂಬಲ ನೀಡುತ್ತೇವೆ. ಇವೆಲ್ಲಕ್ಕಿಂತ ಮಿಗಿಲಾಗಿ ನಮ್ಮದೇ ಆದ "ರೈತ ಸಂಘ"ದಲ್ಲಿ ಸೇರಿ ನಾವುಗಳು ನಮ್ಮ ಈ ಕೆಳಗಿನ ನ್ಯಾಯವಾದ ಕೇಳಿಕೆಗಳನ್ನು ಗಳಿಸುತ್ತೇವೆಂದು ದೃಢಸಂಕಲ್ಪವನ್ನು ಆಗಸ್ಟ್ ೧೫ರಂದು ಮಾಡುತ್ತೇವೆ.

P. T. O.

* ಕೂಲಿಗಾರರು ಮತ್ತು ರಾಜಕೀಯ ಮುಖಂಡರುಗಳ ಮೇಲಿರುವ ಗಡೀ ಭಾರು ಆಜ್ಞೆಗಳೆಲ್ಲಾ ರದ್ದಾಗಬೇಕು.
* ಶ್ರೀ ಹನುಮಂತಯ್ಯನವರ, ಈಸೂರು ಶ್ರವಣ ಬೆಳಗೊಳದ ಬಂದಿಗಳ ಮತ್ತು ಈಗತಾನೆ ಶಿಕ್ಷೆಗೊಳಗಾಗಿರುವ ಕೋಲಾರ ಚಿನ್ನದ ಗಣಿಯ ಕೂಲಿಗಾರರ ಬಿಡುಗಡೆಯಾಗಬೇಕು.
* ಕೂಲಿಗಾರರ ಮತ್ತು ರೈತರ ಸಂಘಟನೆಗೆ ಬೇಕಾದ ಹಕ್ಕುಗಳು, ಸ್ವಾತಂತ್ರ್ಯಗಳು ದೊರಕಬೇಕು.
* ರೈತರು ಕೊಡಬೇಕಾದ ತೆರಿಗೆಯನ್ನು ಕಡಿಮೆ ಮಾಡಬೇಕು.
* ಸರ್ಕಾರವು ಕಡಿಮೆ ದರದಲ್ಲಿ, ಗೊಬ್ಬರ, ಬೀಜ ಮತ್ತಿತರ ಸಾಮಗ್ರಿಗಳನ್ನು ಒದಗಿಸಬೇಕು.
* ದವಸ ಧಾನ್ಯಗಳು, ಕಾಳಸಂತೆಗೆ ಹೋಗಲು ಅವಕಾಶವಾಗದಂತೆ ಪರಿಣಾಮಕಾರಿಯಾದ ಕಾರ್ಯಕ್ರಮ ಕೈಗೊಳ್ಳಬೇಕು.
* ಹೊಲವಿಲ್ಲದ ರೈತರಿಗೆ ಹೊಲ ಕೊಡಿಸಬೇಕು.
* ಬಕ್ಕೆಲತೆನ, ಜಮೀನೇನಿದ್ದರಿ ಪದ್ಧತಿ ನಿರ್ನಾಮವಾಗಬೇಕು.

ಭಾರತದ ಪ್ರಮುಖ ರಾಜಕೀಯ ಪಕ್ಷವಾದ ಕಾಂಗ್ರೆಸ್ ಆಗಸ್ಟ್ ೧೫ರ ಆಚರಣೆಯನ್ನು ವಿಜೃಂಭಣೆಯಿಂದ ನಿರವೇರಿಸುವುದು. ರೈತ ಬಂಧುಗಳೆಲ್ಲರೂ ಈ ಸಮಾರಂಭದಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ. ತಮ್ಮ ಮನೆಗಳ ಮೇಲೆ ರಾಷ್ಟ್ರೀಯ ಧ್ವಜವನ್ನು ಹಾರಿಸಬೇಕೆಂದೂ, ಮತ್ತು ಆ ದಿನದ ಮೆರವಣಿಗೆಯಲ್ಲಿ ಮತ್ತು ಸಭೆಗಳಲ್ಲಿ ಭಾಗವಹಿಸಬೇಕೆಂದೂ ಪ್ರಾರ್ಥಿಸುತ್ತೇವೆ.

ಕಾರ್ಯಕ್ರಮ :

ಬೆಳಿಗ್ಗೆ ೬ ಘಂಟೆಗೆ ಧ್ವಜಾರೋಹಣ ಶ್ರೀ ಕೃಷ್ಣಾ ವೀವಿಂಗ್ ಮಿಲ್ಸ್, ಸುಬ್ರಮಣ್ಯಪುರದಲ್ಲಿ

,, ೮-೩೦ ಕ್ಕೆ ಮೆರವಣಿಗೆ: ಸುಬ್ರಮಣ್ಯಪುರದಿಂದ ಹೊರಟು ತಲಗಟ್ಟಪುರ ಸೇರಿ, ಜರ್ಗನಹಳ್ಳಿ ಮೂಲಕ ಸುಬ್ರಮಣ್ಯಪುರಕ್ಕೆ ಸೇರುವುದು.

ರಾಷ್ಟ್ರೀಯ ಧ್ವಜ ಚಿರಾಯುವಾಗಿ ಬಾಳಲಿ !

ರೈತ ಕೂಲಿಗಾರರ ಧ್ವಜ ಶಾಶ್ವತವಾಗಿರಲಿ !!

ಇಂಕಿಲಾಬ್ ಜಿಂದಾಬಾದ್.

೧. ಎಂ. ಎಸ್. ಕೃಷ್ಣ, ಕಾರ್ಯದರ್ಶಿ, ಶ್ರೀ ಕೃಷ್ಣಾ ವೀವಿಂಗ್ ಮಿಲ್ಸ್ ಕೆಲಸಗಾರರ ಸಂಘ, ಸುಬ್ರಮಣ್ಯಪುರ.
೨. ವೈ. ಮುನಿಯಪ್ಪ, ಯೆಲಚೇನಹಳ್ಳಿ, ೩. ಟಿ. ಲಕ್ಷ್ಮಣ, ಕೋಣನ ಕುಂಟೆ
೪. ಬೈರಪ್ಪ, ದೊಡ್ಡಕಲ್‌ಸಂದ್ರ, ೫. ಬೈರಪ್ಪ, ಹುಚ್ಚಪ್ಪನಪಾಳ್ಯ.
೬. ಸಿ. ನಂಜ, ರಘುವನಹಳ್ಳಿ, ೭. ನೀಲಕಂಠಾಚಾರ್, ಬೈಯ್ಯಣ್ಣನ ಪಾಳ್ಯ (ವಾಜರಹಳ್ಳಿ)
೮. ಚೆಲುವಯ್ಯ ತಲಗಟ್ಟಪುರ, ೯. ಟಿ. ವೆಂಕಟಸ್ವಾಮಿ, ತಲಗಟ್ಟಪುರ.
೧೦. ಮುನಿವೆಂಕಟ, ಹೊಸಹಳ್ಳಿ, ೧೧. ಎ. ವಿ. ನರಸಿಂಹಯ್ಯ, ಗುಬ್ಬಾಳ.

ಚಂಪಾ ಅಂಡ್ ಕೋ., ಬೆಂಗಳೂರು ನಗರ

INDEPENDENCE WEEK CELEBRATIONS

August 15th will usher in a new era in the National Life of our Country.

What are the tasks ahead of us and how are we to march forward for the attainment of complete Independence?

Come and hear our Star Debaters

SJT. V. BALARATHNAM

SJT. D. R. KRISHNAMURTHY

s p e a k o n

"AUG. 15th & AFTER"

ON TUESDAY THE 12th AUGUST

AT 6 P. M.

AT Y. M. C. A. (CITY)

Smt. **S. R. VIMALA** will preside

Bangalore Students' Federation.

Champa & Co., B-City

ವಿದ್ಯಾರ್ಥಿ ಕಾಂಗ್ರೆಸ್

ಸ್ವಾತಂತ್ರ್ಯ ದಿನಾಚರಣೆ

ರಾಷ್ಟ್ರಧ್ವಜಕ್ಕೆ ಜಯವಾಗಲಿ

ಆಗಸ್ಟ್ ೧೫ ರಂದು ಭಾರತದಲ್ಲಿ ಐತಿಹಾಸಿಕ ದಿನ; ಶತಮಾನಗಳಿಂದಲೂ, ಹಾರಾಡುತ್ತಿದ್ದ ಪರಕೀಯ ಧ್ವಜವನ್ನು ಕಿತ್ತೊಗೆದು ಆ ಧ್ವಜದೆಡೆ ರಾಷ್ಟ್ರಧ್ವಜ ಹಾರಾಡಲು ಆರಂಭವಾಗುವ ಹೆಮ್ಮೆಯ ದಿನ. ಭಾರತಾಂತ್ಯದ ಜನತೆ ತನ್ನ ಹೋರಾಟ ಪರಿಪಕ್ವವಾಗಿ, ಸ್ವಾತಂತ್ರ ಸಂಗ್ರಾಮದ ಅತಿಸುಖ್ಯವಾದ ಘಟ್ಟವನ್ನು ಜಯಪ್ರದವಾಗಿ ಮುಟ್ಟಿದ ದಿನ.

ಭಾರತ ಸ್ವತಂತ್ರವೆಂದು ಸಾರಲ್ಪಡುತ್ತಿರಲು ಆಗಸ್ಟ್ ೧೫ರಂದು, ಅರ್ಧ ಶತಮಾನದಿಂದ ದೇಶಕ್ಕೆ ಬಲಿದಾನವಾದ ಅಸಂಖ್ಯಾತ ಹುತಾತ್ಮರು ನಮ್ಮ ನೆನಪಿಗೆ ಸುಳಿಯುತ್ತಾರೆ. ಎಚ್ಚೆತ್ತ ಭಾರತ ಹೋರಾಟೋನ್ಮುಖವಾಗಿ ಪರಕೀಯ ಆಡಳಿತವನ್ನು ಕೊನೆಗಾಣಿಸುವ ಪವಿತ್ರ ಧ್ಯೇಯದಿಂದ ಮುನ್ನಡೆದಿರುವುದು ನೆನಪಿಗೆ ಬರುತ್ತದೆ. ಹುತಾತ್ಮರಿಗೆ ನಮ್ಮ ಗೌರವಪೂರ್ವಕವಾದ ವಂದನೆಗಳು; ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಪ್ರತಿಯೋಧನಿಗೂ, ನಮ್ಮ ಸ್ವಾತಂತ್ರ ದಿನಾಚರಣೆಯ ಸ್ವಾಗತ.

ಆಗಸ್ಟ್ ೧೫ರಿಂದ ದೇಶದಲ್ಲಿ ಹೊಸ ಶಕೆಯೊಂದು ಆರಂಭವಾಗಲಿದೆ. ಕಳೆದ ಶತಮಾನದಿಂದ ಜನತೆಯನ್ನು ತುಳಿದಿಟ್ಟು ದಬ್ಬಾಳಿಕೆ ನಡೆಸಿದ ಪರಕೀಯ ಸಾಮ್ರಾಜ್ಯಶಾಹೀ ಸರಕಾರದ ಬದಲು ದೇಶದ ರಾಷ್ಟ್ರೀಯ ನಾಯಕರಿಂದ ಕೂಡಿದ ಸರಕಾರ ದೆಹಲಿಯಲ್ಲಿ ಕೂಡಲಿದೆ. ಪರಕೀಯ ಆಡಳಿತದ ದುರ್ಭೀತಿಯ ದಿನ ಕಳೆದು ಸ್ವರಾಜ್ಯದ ಶಕೆಯು ಆರಂಭವಾಗುತ್ತದೆ.

ಭಾರತವನ್ನು ಹಿಂದಿನಂತೆ ಆಳಲು ದಾರಿಕಾಣದ ಸಾಮ್ರಾಜ್ಯ ಶಾಹಿಗಳು ಭಾರತದ ಸ್ವಾತಂತ್ರ ವನ್ನೊಪ್ಪಿದ್ದಾರೆ; ಇದು ಜನತೆಯ ಅಪಾರ ತ್ಯಾಗದ ಫಲ, ನಮ್ಮ ಹೋರಾಟದ ಶಕ್ತಿಯ ಅಳತೆ, ಹಾಗೂ ಅಂತರ ರಾಷ್ಟ್ರೀಯ ಸಾಮ್ರಾಜ್ಯ ತತ್ವದ ದುರ್ಬಲತೆ, ಇಷ್ಟಕ್ಕೆ ಸೋಲನೊಪ್ಪಿಕೊಳ್ಳದೆ ಸಾಮ್ರಾಜ್ಯವಾದಿಗಳು ಮುಸುಕಿನ ಗುದ್ದಾಟ ಆರಂಭ ಮಾಡಿದ್ದಾರೆ. ದೇಶವನ್ನು ಇಬ್ಭಾಗಮಾಡಿ, ಇಬ್ಬರಿಗೂ ಎಂದೂ ಕೊನೆಗಾಣದ ಕಾಳಗವನ್ನು ತಂದೊಡ್ಡಿ, ತನ್ಮೂಲಕ ತಮ್ಮ ಆಡಳಿತವನ್ನು ಇನ್ನೂ ನಡೆಸಬೇಕೆಂಬುದು ಅವರ ಪ್ರಯತ್ನ; ತಮ್ಮ ಕೈಗೊಂಬೆಗಳಾದ ಸಂಸ್ಥಾನಾಧೀಶ್ವರರನ್ನು ಹೇಗಾದರೂ ಕಾಪಾಡಿ, ಭಾರತದಲ್ಲಿ ತಮ್ಮ ಆರ್ಥಿಕ ಮತ್ತು ಮಿಲಿಟರಿ ಪ್ರದೇಶಗಳನ್ನು ನಿರ್ಮಾಣ ಮಾಡಬೇಕೆಂದು ಅವರ ಕುಹಕ ಯತ್ನ. ಸಾಮ್ರಾಜ್ಯ ಶಾಹಿಯು ಜನತೆಯನ್ನು ಛಿದ್ರ ಛಿದ್ರ ನೂಡಿ ಹೊಸರೀತಿಯಲ್ಲಿ ಆಡಳಿತ ನಡೆಸುವ ಯೋಜನೆಯಲ್ಲಿ ತೊಡಗಿದೆ. ಆದರೆ ಸ್ವಾತಂತ್ರ ಸಂಗ್ರಾಮದಲ್ಲಿ ನುರಿತಿರುವ ಭಾರತದ ಜನತೆ ಇದಕ್ಕೆ ಎಡೆಕೊಡಲಾರರು; ಸಾಮ್ರಾಜ್ಯ ಶಾಹಿಗಳ ಈ ಗುದ್ದಾಟವನ್ನು ಮುಸುಕಿನಲ್ಲೇ ಮಣ್ಣು ಮಾಡಬೇಕು.

ಭಾರತ ಸ್ವಾತಂತ್ರ್ಯವಾಗುವ ಆಗಸ್ಟ್ ೧೫ರಿಂದ ಸಂಸ್ಥಾನದ ವಿದ್ಯಾರ್ಥಿಗಳಾದ ನಮ್ಮ ಹೊಣೆಗಾರ್ಮಿಕತೆಯೂ ಹೆಚ್ಚಾಗುವುದು. ಶಿಕ್ಷಣ ಪದ್ಧತಿ ಸರಿಯಿಲ್ಲದೆ ವಿದ್ಯಾರ್ಥಿಗಳು ಕೊಳೆಯುತ್ತಿರುವುದು ಕೊನೆಗಾಣಬೇಕು; ವಿಶ್ವವಿದ್ಯಾನಿಲಯ ದಬ್ಬಾಳಿಕೆಯ ಸಂಸ್ಥೆಯಾಗಿರುವುದು ನಿಂತು ಪ್ರಜಾಸತ್ತಾತ್ಮಕ ಸಂಸ್ಥೆಯಾಗಬೇಕು. ಅಂತೆಯೇ ವಿದ್ಯಾರ್ಥಿಗಣ ಜವಾಬ್ದಾರಿ ಸರ್ಕಾರ ಹೋರಾಟದ ಮುಂದಳದ ಯೋಧರಾಗಬೇಕು.

ದ. ತಿ. ನೋ.

ಭಾರತದ ಎಲ್ಲಿಡೆಯಲ್ಲೂ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುತ್ತಿರುವಾಗ ಸಂಸ್ಥಾನದಲ್ಲಿ ಜನಪ್ರಿಯ ನಾಯಕರಾದ ಶ್ರೀ ಹನ್ನುಮಂತಯ್ಯನವರು ಸೆರೆಮನೆಯಲ್ಲಿ ಕೊಳೆಯುತ್ತಿದ್ದಾರೆ. ಈ ಸೂರು—ಶ್ರವಣಬೆಳಗೊಳದ ಸ್ವಾತಂತ್ರ್ಯವೀರರು ಸ್ವಾತಂತ್ರ್ಯದ ಬೆಳಕನ್ನು ನೋಡಲಾರರು; ಸಂಸ್ಥಾನದ ಕಾರ್ಮಿಕ ಮುಖಂಡರ ಮೇಲೆ ಎಸೆದಿರುವ ಗಡೀಪಾರಾಜ್ಞೆಯನ್ನು ವಾಪಸ್ ತೆಗೆದುಕೊಂಡಿಲ್ಲ. ಬದಲು ತಮ್ಮ ಹಕ್ಕಿಗಾಗಿ ಹೋರಾಡಿದ ಚಿನ್ನದ ಗಣಿ ಕಾರ್ಮಿಕ ನಾಯಕರು ಅಮಾನುಷ ಶಿಕ್ಷೆಗೆ ಗುರಿಮಾಡಲ್ಪಟ್ಟಿದ್ದಾರೆ. ವಿಶ್ವವಿದ್ಯಾನಿಲಯದ ಸರ್ವಾಧಿಕಾರಿ ಆಡಳಿತಗಾರರು ಎಂಟು ವಿದ್ಯಾರ್ಥಿಗಳನ್ನು ಕಾಲೇಜುಗಳಿಂದ ಹೊರದೂಡಿದ್ದಾರೆ. ಸಂಸ್ಥಾನದ ಈ ಪರಿಸ್ಥಿತಿ ಬದಲಾಗಬೇಕು ಬದಲಾಗಲು ಜವಾಬ್ದಾರಿ ಪ್ರಜಾಸರ್ಕಾರ ಸ್ಥಾಪನೆಯೇ ಸಂಜೀವಿನಿ.

ಪರಿಸ್ಥಿತಿ ಹದಗೆಡುಮತೆ ವಿದ್ಯಾರ್ಥಿವೃಂದ ಬಿಡಬಾರದು. ಕೋಮುವಾರು ವಿಷಜ್ವಾಲೆ, ವಿದ್ಯಾರ್ಥಿಗಳೆಗಳನ್ನು ದಹಿಸುವುದೇ ವಿನಃ ನಿರಂಕುಶಾಧಿಕಾರಿಗಳಿಗೆ ತಾಕಲಾರದು. ವಿದ್ಯಾರ್ಥಿವೃಂದ ಭಾರತದ ಎಲ್ಲಿಡೆಯಲ್ಲೂ ಐಕ್ಯವಾಗುತ್ತಿರುವಂತೆ ನಮ್ಮ ಸಂಸ್ಥಾನದಲ್ಲೂ ಐಕ್ಯರಂಗ ರಚಿತವಾಗಬೇಕು. ಕೆಲವು ದಿನದಿಂದ ಬೆಳೆದು ಬರುತ್ತಿರುವ ಐಕ್ಯಮನೋಭಾವನೆಯನ್ನ ಮುಂದೆ ತರಬೇಕು.

ವಿದ್ಯಾರ್ಥಿಗಳ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿಯೂ ಮತ್ತು ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ಹೆಮ್ಮೆಯ ಪಾತ್ರ ವಹಿಸಲು ವಿದ್ಯಾರ್ಥಿಗಳನ್ನು ಸಂಘಟಿಸುವುದಕ್ಕಾಗಿಯೂ ವಿದ್ಯಾರ್ಥಿ ಕಾಂಗ್ರೆಸ್ ಸತತ ದುಡಿಯುತ್ತಿದೆ.

ಈ ಆಗಸ್ಟ್ ೧೫ರಂದು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗುವವರೆಗೂ ಶಾಂತಿಯಿಂದ ಕೂಡುವುದಿಲ್ಲವೆಂದು ಪಣ ತೊಡೋಣ. ಸ್ವತಂತ್ರ ಸಂಯುಕ್ತ ಕರ್ನಾಟಕದೆಡೆಗೆ ಮುನ್ನಡೆಯೋಣ.

ವಿದ್ಯಾರ್ಥಿ ಕಾಂಗ್ರೆಸ್ :

ಈ ಸ್ವತಂತ್ರ ದಿನಾಚರಣೆಯ ಚೆನ್ನಪಟ್ಟಣ ವಿದ್ಯಾರ್ಥಿ ಕಾಂಗ್ರೆಸ್‌ನ ಕಾರ್ಯಕ್ರಮ ಈ ರೀತಿ ಇದೆ.

ಕಾರ್ಯಕ್ರಮ :

೧೪-೮-೪೭ ರಾತ್ರಿ ೧೨ ಘಂಟೆ ೧ ನಿಮಿಷಕ್ಕೆ ಕೊಲ್ಲಾಪುರದಮ್ಮನವರ ದೇವಾಲಯದಲ್ಲಿ ಅಭಿಷೇಕ ಮತ್ತು ಮಹಾಮಂಗಳಾರತಿ. ಸ್ವಾತಂತ್ರ್ಯೋದಯವನ್ನು ಘೋಷಿಸುವರು.

೧೫-೮-೪೭ ಪ್ರಾತಃಕಾಲ ೫ ಗಂಟೆಯಿಂದ ೭ರ ವರೆಗೆ ಕೊಲ್ಲಾಪುರದಮ್ಮನವರ ಮೈದಾನದಲ್ಲಿ
ಪ್ರಭಾತ್ ಫೇರಿ, ೯ ಘಂಟೆಗೆ ಧ್ವಜಾರೋಹಣ.
೧೦ ಗಂಟೆಗೆ ಅನಂತಾನಂತ ಊರಿನ ಮುಖ್ಯ ಬೀದಿಗಳಲ್ಲಿ ಮೆರವಣಿಗೆ.
ಸಂಜೆ ೬ ಗಂಟೆಗೆ ಕೊಲ್ಲಾಪುರದಮ್ಮನ ದೇವಸ್ಥಾನದಲ್ಲಿ ಮಂಗಳಾರತಿ.

'ಜೈ ಹಿಂದ್'

ಚೆನ್ನಪಟ್ಟಣ ವಿದ್ಯಾರ್ಥಿ ಕಾಂ.

ಚಂಪಾ ಆಂಡ್ ಕೋ., ಬೆಂಗಳೂರು ನಗರ

D. O. No. C.C.20/47-48. Encls: Five.

Mr. S.Muninenjappa, B.A.,B.L.,
Deputy Commissioner.

OFFICE OF THE DEPUTY COMMISSIONER,
SHIMOGA DISTRICT.

Dated Shimoga, 15th August *1947.*

Dear Sir,

Subject:- Observance of Independence Day on August 15th.

In continuation of my D.O.letter of even number dated the 13th instant on the above subject, I forward herewith, for the information of Government, copies of two further reports Nos. S.B.8/47-48 dated the 14th instant together with that of their enclosures, received from the District Superintendent of Police, Shimoga District.

Further developments will be watched and reported.

Yours sincerely,

S Muninenjappa

V.Vedavyasacharya, Esq., B.A.,
Chief Secretary to Government,
Bangalore.

Letter No. S.B.8/47-48 dated 14-8-47 from the District Superintendent of Police, Shimoga District, to the Deputy Commissioner, Shimoga District.

Re: observance of Independence Day on August 15th.

...

In continuation of this office S.B. report of even number dated 13-8-47 on the above subject, I have the honour to state that it is reported that a meeting was held at Shiralkoppa on the evening of 11-8-47 under the Presidentship of Mr.N. Ramachandra in connection with drafting programmes for the Independence Day and a Committee consisting of M/s K.Bangarappa, Surangi Sangappa, Surangi Jayadevappa, Agadi Krishnamurthy, Thadagani Shivappa, Udagani Gangadharappa, Hutchu Rao, Shroff Ramakrishnappa, Parameswaraiah , T.Gurushanthappa, Papanna, Dharanappa Gowda, Yanne Veerappa was formed. The following programme was also settled.

15-8-47 - 8 A.M. - Prabhata Pheri.
9 A.M. - Hoisting of Mysore Flag and the National Flag in the Maidan opposite to the Muslim Makhan and Public Meeting.
2 P.M. to 6 P.M. - Procession with the photos of All India Congress leaders in a double bullock cart, drawn by four pairs of bullocks, with music and slogans in the important streets of Shiralkoppa Town.
8 P.M. to 12 M.N.- Feeding the Public.

They further resolved to collect funds from the public for the purpose. It is said that the Rice Mill owners have agreed to supply rice for feeding nearly 2000 people on the night of 15-8-47.

It is further reported that when Mr.N.Ramachandra, the President suggested that the celebrations should be in co-operation with Muslims, M/s. Bangarappa, Surangi Sangappa, Udagani Gangadharappa, Agadi Krishnamurthi and Yanne Veerappa protested andrefusedto join with Muslims on the plea that there is no harmony between the two communities. Due to this opposition, Mr.N.Ramachandra resigned his presidentship and was succeeded by Mr.T.D.Mahadevappa.

After the meeting, the above members went round the town and collected funds to theextent of Rs.106/-. It is said that the local congresites will invite the neighbouring villagers also to participate in the celebrations.

It is further reported that the Muslims of Shiralkoppa will also observe the Day by hoisting the Mysore Flag, National Flag and the League Flag and by holding a public meeting in front of the Muslim Makhan and sweets will be distributed to school children.

It is reported that the following programme has been announced by the Committee appointed in connection with the observance of the Day at Sagar.

14-8-47 - 10 P.M. to 1 A.M. - Prayer at Sri Rama Mandir, Illumination and News relay from Delchi.
15-8-47 - 6.30 A.M. - Prabhata Pheri.
8.00 A.M. - Flag hoisting at Gandhi Maidan.
3.00 P.M. - Procession with the idol of Bharatha Mata in the important streets of the town.
6.00 P.M. - Public meeting at Gandhi Maidan.
7.30 P.M. - Illumination and Pooja at temples. Dramas by Municipal High School Union.

It is reported that in connection with the observance of the Day, a meeting of the Sorab Minor Municipal Council was held on 12-8-47, under the Presidentship of the Amildar, Sorab Taluk and sanction a sum of Rs.300/-, to meet the expenditure on the Day. It was resolved to pay a sum of Rs.50/- to the Educational Institution at Sorab for purchasing books for the use of poor boys; Rs.25/- for poojas in temples and Mosques; Rs.15/- for planting Mango and Sampige Plants in the park to be newly opened near Sri Ranganatha Temple and to be named as'Jaya Chamaraja Park' in commemoration of the Day and the remaining amount out of Rs.300/- to be spent towards distribution of sweets. It was also resolved to take out a procession on the morning of August 15th with the Mysore Flag and the Indian National Flag.

It is further reported that Mr.Nadahalli Manjappa, Secretary, Taluk Congress Committee, Sorab is collecting funds in connection with the observance of the Day and has decided to take out a procession on the morning of August 15th with the Indian National Flag and to hold a public meeting in the evening.

It is reported that at a meeting of the Town Municipal Council, Bhadravati, held on 12-8-47, a committee with Mps B.Madhava char, Viswanatharadhya, A.K.Anwar; K.S. Ramachandra Setty and K.Thimmaiah was formed in connection with collection of funds

ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕೂಲಿಗಾರರ ಸಂಘ, ಭದ್ರಾವತಿ.

ಪ್ರಿಯಬಂಧುಗಳೆ,

ಸುಮಾರು ಎರಡು (2) ಶತಮಾನಗಳಿಂದ ಭಾರತವೇಶವನ್ನು ಗುಲಾಮಗಿರಿ ಯಲ್ಲಿಟ್ಟು ಆಳುತ್ತಿದ್ದ ಬ್ರಿಟಿಶ್ ಸಾಮ್ರಾಜ್ಯಶಾಹಿ ತಾ|| 14—8—47 ನೇ ರಾತ್ರಿ 12 ಘಂಟೆಗೆ ಅಧಿಕಾರವನ್ನು ಭಾರತೀಯರಿಗೆ ವಹಿಸುವುದರಿಂದ

ಹಿಂದೂಸ್ಥಾನ ಸ್ವತಂತ್ರವಾಗುವುದು.

ಈ ಸ್ವಾತಂತ್ರ್ಯ ದಿನಾಚರಣೆಯ

ಸಂಬಂಧವಾಗಿ ಈ ಕೆಳಗೆ ಕಂಡ ಕಾರ್ಯಕ್ರಮಗಳನ್ನು ರೂಪುಪಡಿಸಲಾಗಿದೆ.

ತಾ|| 14—8—47 ನೇ ಗುರುವಾರ ಮಧ್ಯರಾತ್ರಿಗೆ ಸರಿಯಾಗಿ ಸಂಘದ ಆಫೀಸಿನಲ್ಲಿ ಪೂಜೆ ಮತ್ತು ಪ್ರಾರ್ಥನೆ.

ತಾ|| 15—8—47 ನೇ ಶುಕ್ರವಾರ ಬೆಳಿಗ್ಗೆ 6½ ಘಂಟೆಗೆ ಸಂಘದ ಕಟ್ಟಡದ ಮೇಲೆ ಲೇಬರ್ ಧ್ವಜವನ್ನು ಹಾರಿಸುವುದು.

7 ಘಂಟೆಗೆ ಸಂಘದ ಆಫೀಸಿನಿಂದ ಹೊರಟು ಪೌರಸಭಾ ಭವನದಿಂದ 7½ ಘಂಟೆಗೆ ಹೊರಡಲಿರುವ ಪ್ರಭಾತ್ ಫೇರಿಯೊಡನೆ ಮಿಲನವಾಗುವುದು. ಮುಂದಿನ ಕಾರ್ಯಕ್ರಮಗಳನ್ನು ಬೆಳಿಗ್ಗೆ 9½ ಘಂಟೆಗೆ ಪೈಪ್‌ಫೌಂಡ್ರಿ ಪಕ್ಕದ

ಝಂಡಾ ಮೈದಾನದಲ್ಲಿ ನಡೆಯಲಿರುವ

ಬಹಿರಂಗ ಸಭೆಯಲ್ಲಿ

ತಿಳಿಸಲಾಗುವುದು. ಕೆಲಸಗಾರರೆಲ್ಲರೂ ಮೇಲ್ಕಂಡ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ಪ್ರಾರ್ಥನೆ.

ಎಸ್. ಹೊನ್ನಯ್ಯ,
ಕಾರ್ಯದರ್ಶಿ,
ಕಾರ್ಯಕಾರಿ ಸಮಿತಿಯ ಪರವಾಗಿ.

ಇಂತಿ
ಭದ್ರಾವತಿ,
ತಾ|| 13—8—47.

ಶ್ರೀ ವಿಜಯಾನಂದ ಪ್ರೆಸ್, ಶಿವಮೊಗ್ಗ.

Letter No. S.B.8/47-48 dated 14-8-47 from the District Superintendent of Police, Shimoga, to the Deputy Commissioner, Shimoga District.

Re: observance of Independence Day on August 15th.

...

In continuation of this office S.B. report of even number dated 14-8-47 on the above subject, I have the honour to enclose herewith a copy of the printed handbill issued by Mr. K. Krishnappa, President, Town Municipal Council, Shimoga, re: certain programmes to be observed by the said council, for favour of information.

It is further ascertained that the detailed programmes of the Town Municipal Council, Shimoga, on 14th and 15th instants will be as follows:-

14-8-47	- 12 midnight	- Special meeting of the Municipal Council and unveiling the photos of M/s Gandhi, Jawaharlal Nehru and Nethaji Subhas Chandra Bose in the Municipal Office.
		Fire Display.
15-8-47	- 9.00 A.M.	- Hoisting the Mysore Flag and Indian National Flag in front of the Municipal Office.
	10.00 A.M.	- Opening ceremony of the Public Radio at Ramanna Setty Park by Mr. H. Siddaiah.
	Afternoon	- Poor Feeding.
	6-00 P.M.	- Public Meeting at Karnataka Sangha Hall under the Presidentship of Mr. H. Lingappa, Advocate, Shimoga.

It is learnt that Mr. Dodda Thimmaiah, President, District Adikarnataka Abhivruchi Sangha, Shimoga has sent telegrams to the Dewan of Mysore and His Highness the Maharaja of Mysore, praying for entry into temples on August 15th, the Day of Indepdence.

"copy"

S. Ramiramaiah.

Deputy Commissioner,
Shimoga District.

ಶಿವಮೊಗ್ಗ ಪೌರಸಭಾ ಕಾರ್ಯಾಲಯ

ನೋಟೀಸ್.

ಸ್ವಾತಂತ್ರ್ಯ ದಿನಾಚರಣೆ ಉತ್ಸವ ನಡೆಸುವ ಸಂದರ್ಭದಲ್ಲಿ ತಾರೀಖು 14—8—1947 ನೆ ಗುರುವಾರ ರಾತ್ರಿ 12 ಘಂಟೆಗೆ ಪುರಭವನದಲ್ಲಿ **ಮಹಾತ್ಮ ಗಾಂಧಿ, ಪಂಡಿತ್, ಜವಹರ್‌ಲಾಲ್ ನೆಹರು, ಮತ್ತು ನೇತಾಜಿ ಸುಭಾಸಚಂದ್ರ ಭೋಸ್,** ಈ ಮಹನೀಯರುಗಳ ಭಾವಚಿತ್ರಗಳನ್ನು ಅನಾವರಣ ಮಾಡಲು ಮತ್ತು ತಾರೀಖು 15—8—1947 ನೆ ಶುಕ್ರವಾರ ಪ್ರಾತಃಕಾಲ 9 ಘಂಟೆಗೆ **ಶ್ರೀ ರಾಮಣ್ಣಶೆಟ್ಟಿ ಪಾರ್ಕಿನಲ್ಲಿ** ರೇಡಿಯೋ ಪ್ರಾರಂಭೋತ್ಸವವನ್ನು ನಡೆಸಲು ಏರ್ಪಡಿಸಿರುತ್ತೆ.

ಶ್ರೀಮಾನ್ ಹೆಚ್. ಸಿದ್ದಯ್ಯ, ಬಿ.ಎ.,ಎಲ್.ಎಲ್.ಬಿ., ಆಡ್ವೋಕೇಟ್, ಇವರು ಈ ಮಹೋತ್ಸವವನ್ನು ನಡೆಸಲು ದಯಮಾಡಿ ಒಪ್ಪಿರುತ್ತಾರೆ. ಸರ್ವರಿಗೂ ಈ ಸಮಾರಂಭಗಳಿಗೆ ಆಹ್ವಾನವಿದೆ.

ತಾರೀಖು 14—8—1947 ನೆ ರಾತ್ರಿ 12 ಘಂಟೆಗೆ ಪುರಭವನದ ಮುಂದೆ ಬಾಣ, ಬಿರುಸು ಏರ್ಪಡಿಸಿರುತ್ತೆ.

ಶಿವಮೊಗ್ಗ
ತಾ. 14—8—47.
S. K. P.

ಕೆ. ಕೃಷ್ಣಪ್ಪ,
ಅಧ್ಯಕ್ಷರು;
ಶಿವಮೊಗ್ಗ ಪೌರಸಭೆ.

SECRET

C. F. No. 46j

GOVERNMENT OF MYSORE

No. C.C.90/47.
Encls.

OFFICE OF The Superintendent of Police,
Bangalore City.

Date 15th August 1947.

To

The Deputy Commissioner and the
District Magistrate, Bangalore Dist.

Sir

Sub:- Independance Day Celebration in Bangalore City.

I have the honour to state that in the above connection Police arrangements had been made on the 14th night at all places in Bangalore City and not a single incident was reported even though throughout the whole night hundreds of people were moving up and down in the whole of the City either participating in decorating their streets or for sight-seeing. The Muslim public also moved towards C & M Station, Bangalore last night for prayers and returned, mostly via Ulsoorgate and the night passed off peacefully.

I have etc.,

Superintendent of Police,
Bangalore City.

P.C. 33/47-45 15.8.47

Forwarded with compliments to the Chief Secretary

to the Government of Mysore, Bangalore for favour of information.

Deputy Commissioner,
Bangalore District

C. F. No. 46] GOVERNMENT OF MYSORE

No. SB.113/46-47 OFFICE OF the Inspector-General of Police
Encls. in Mysore, Bangalore.

SECRET Date d 13th August 1947.

To

The Chief Secretary to the Government of
Mysore, Bangalore.

CONFIDENTIAL BRANCH, No. 669 Date 19/8

Sir,

I have the honour to enclose for the information of Government, copies of printed pamphlets issued by the Bangalore and the Mysore branches of the Communist Party, appealing to the public to observe "Independence Day" on the 15th August 1947.

The appeals urge the release of Mr.K.Hanumanthiah and the Isoor prisoners, besides pledging support to the Satyagraha movement proposed to be started by the Congress for the establishment of Responsible Government in the State.

I have the honour to be,
Sir,
Your most obedient servant,

INSPECTOR-GENERAL OF POLICE
IN MYSORE.

CHIEF SECRETARY 7 AUG 1947 GOVT. OF

1. ಸಂಪೂರ್ಣ ಜವಾಬ್ದಾರಿ ಸರ್ಕಾರಕ್ಕಾಗಿ ಎಲ್ಲರೂ ಒಗ್ಗಟ್ಟಾಗಿ.

2. ಶ್ರೀ ಹನುಮಂತಯ್ಯ, ಈಸೂರು ಮತ್ತು ಕೆ ಜಿ.ಎಫ್. ರಾಜಕೀಯ ಖೈದಿಗಳನ್ನು ಬಿಡುಗಡೆಯಾಗಲಿ.

3. ಎಚ್. ಎಲ್ ಉಪಾಧ್ಯಾಯ, ವಾರ್ತನುತ್ತಿತರ ಮೇಲೆ ಹಾಕಿರುವ ಗಡೀಪಾರಾಜ್ಞೆಯನ್ನು ತೆಗೆದುಹಾಕಲಿ.

ಆಗಸ್ಟ್ ೧೫ ರ ದಿನ ಶತಮಾನಗಳಿಂದ 'ಯೂನಿಯ್ ಜಾಕು' ಹಾರಾಡುತ್ತಿದ್ದ ಜಾಗದಲ್ಲಿ ರಾಷ್ಟ್ರ ಧ್ವಜವು ಹಾರಾಡುವುದು. ವೈಸರಾಯರು ರಾಷ್ಟ್ರೀಯ ಕಾಂಗ್ರೆಸ್ಸಿನ ಮುಖಂಡರಿಗೆ ಅಧಿಕಾರ ಒಪ್ಪಿಸುವರು. ಈಗಿನ ನಡುಗಾಲ ಸರ್ಕಾರವು ಘಟನಾ ಸಮಿತಿಗೆ ಜವಾಬ್ದಾರಿಯುತವಾಗಿ ತಾತ್ಕಾಲಿಕ ಸರ್ಕಾರವಾಗಿ ಪರಿಣಮಿಸುವುದು. ಹಿಂದೀಯ ಒಕ್ಕೂಟವು ರೂಪುಗೊಳ್ಳುವುದು. ಈದಿನ ಹಿಂದೀಯರ ಸ್ವಾತಂತ್ರ್ಯ ಸಮರದ ಇತಿಹಾಸದಲ್ಲಿ ಒಂದು ಮಹತ್ವದ ಮೈಲುಗಲ್ಲಾಗುವುದು. ರಾಷ್ಟ್ರೀಯ ಹೋರಾಟದಲ್ಲಿ ಪ್ರಾಣ ತೆತ್ತ ಹುತಾತ್ಮಾರನ್ನು ಸ್ಮರಿಸುವೆವು.

ಆಗಸ್ಟ್ ೧೫ ರ ದಿನ ಕ್ರಾಂತಿಕಾರ ಮುಷ್ಕರಗಳ ವೀರರಾದ, ನಾವಿಕರನ್ನು ಸೈನಿಕರನ್ನು ಮತ್ತು ವೈಮಾನಿಕರನ್ನು ಸ್ಮರಿಸುತ್ತೇವೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಪಂಚನು ದಳವಾದ ಅಳರಸರ ಕೊನೆಗಾಲ ಸಮೀಪಿಸಿತೆಂದು ಸಾರಿ ಹೇಳಿದ ಕಾಶ್ಮೀರ, ಹೈದರಾಬಾದು, ತಿರುವಾಂಕೂರು ಮತ್ತಿತರ ಸಂಸ್ಥಾನದ ಪ್ರಜೆಗಳಿಗೆ ವಂದನೆಯನ್ನರ್ಪಿಸುತ್ತೇವೆ.

ಆಗಸ್ಟ್ ೧೫ ರಂದು ಬ್ರಿಟಿಷ್ ಸರ್ಕಾರವು ಹಿಂದೂ ದೇಶದಿಂದ ಬಲವಂತವಾಗಿ ಹೊರದೂಡುವಂತೆ ಮಾಡಿದ್ದೇವೆ ಆದರೆ ಮಿಲಿಟರಿ ಮತ್ತು ಆರ್ಥಿಕ ಅಧಿಕಾರದಿಂದ 'ತೆರೆ ಹಿಂದೆನಿಂತು' ದಬ್ಬಾಳಿಕೆ ನಡೆಸಲು ಹೊಂಚು ಹಾಕುತ್ತಿದೆ. ಈ ಕೆಲಸವನ್ನು ನೆರವೇರಿಸಲು ಮೌಂಟಬ್ಯಾಟನ್ನರ ಪ್ರಯ

P. T. O.

ತ್ನವನ್ನೆಲ್ಲಾ ಮಣ್ಣುಗೂಡಿಸಬಹುದೆಂಬ ನಂಬಿಕೆ ಕಮ್ಯೂನಿಸ್ಟ್ ಪಾರ್ಟಿಗಿದೆ. ರಾಷ್ಟ್ರೀಯ ಸರ್ಕಾರವು ಎಲ್ಲರ ಸಹಕಾರವನ್ನ ಪೇಕ್ಷಿಸುವುದು. ಈ ಅಪೇಕ್ಷೆಯಂತೆ ಕಮ್ಯೂನಿಸ್ಟ್ ಪಾರ್ಟಿಯು ತನ್ನ ಹೃತ್ಪೂರ್ವಕವಾದ ಸಹಕಾರವನ್ನು ನೀಡುವುದು.

ಆಗಸ್ಟ್ ೧೫ ರಂದು ಬರೀ ಪ್ರಾಂತ್ಯಗಳಲ್ಲೀ ಅಲ್ಲದೆ ಎಲ್ಲಾ ಸಂಸ್ಥಾನಗಳಲ್ಲೂ ಎಲ್ಲಾ ರಾಜಕೀಯ ಖೈದಿಗಳನ್ನು ಬಿಡುಗಡೆಮಾಡುವ ಪ್ರತಿಬಂಧ ಕಾಜ್ಞೆ ಮತ್ತು ಗಡೀಪಾರಾಜ್ಞೆಗಳನ್ನು ಹಿಂತೆಗೆಯುವ ಕಾರ್ಯದಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ತನ್ನ ಬೆಂಬಲವನ್ನು ಕೊಡುತ್ತದೆ. ಜಮಾನ್ದಾರಿ ಪದ್ಧತಿಯ ನಿರ್ಮೂಲನ ಕೈಗಾರಿಕೋದ್ಯಮಗಳ ರಾಷ್ಟ್ರೀಕರಣ, ಕೆಲಸಗಾರರಿಗೆ ಜೀವನಾವಶ್ಯಕ ಸಂಬಳ ಈ ತಳಹದಿಯ ಮೇಲೆ ಒಂದು ಪಂಚವಾರ್ಷಿಕ ಯೋಜನೆಯನ್ನು ಕಾಂಗ್ರೆಸ್ ಜನಗಳ ಮುಂದಿಡಬೇಕೆಂದುಕೇಳಿಕೊಳ್ಳುತ್ತದೆ.

ಅಖಿಲ ಮೈಸೂರು ಕಾಂಗ್ರೆಸ್ಸು ಕೂಡಲೇ ಸಂಪೂರ್ಣ ಜವಾಬ್ದಾರಿ ಸರ್ಕಾರಕ್ಕೆ ಹೋರಾಟ ನಡೆಸಬೇಕೆಂದು ಕೇಳಿ, ಈ ಹೋರಾಟಕ್ಕೆ ಕಮ್ಯೂನಿಸ್ಟ್ ಪಾರ್ಟಿಯು ತನ್ನ ಪೂರ್ಣ ಬೆಂಬಲವನ್ನು ನೀಡುವುದಲ್ಲದೆ ಎಲ್ಲರಾಜಕೀಯ ಪಕ್ಷಗಳು ಈ ಮಹತ್ಕಾರ್ಯದಲ್ಲಿ ಒಂದಾಗಬೇಕೆಂದು ಕೇಳುವುದು.

ಆಗಸ್ಟ್ ೧೫ ರ ದಿನದ ಘೋಷಣೆ.

ಕಾರ್ಯದರ್ಶಿ,
ಇಂಡಿಯಾ ಕಮ್ಯೂನಿಸ್ಟ್ ಪಾರ್ಟಿ,
ಮೈಸೂರು ಸಮಿತಿ, ಮೈಸೂರು.

ಆಗಸ್ಟ್ ತಿಂಗಳು ೧೪ ನೇ ಶನಿವಾರ ಸಂಜೆ ೫ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಎಂ. ಎ. ರಾಜಶೇಖರವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯುತ್ತದೆ. ಸರ್ವರೂ ದಯಮಾಡಬೇಕಾಗಿ ವಿನಂತಿ.

ಕುಗನ್ ಪವರ್ ಪ್ರೆಸ್ ಮೈಸೂರು

ಬೆಂಗಳೂರು ಜನತೆಗೆ ಕಮ್ಯೂನಿಸ್ಟ್ ಪಾರ್ಟಿಯ ಕರೆ

ಭಾರತದ ರಾಷ್ಟ್ರೀಯ ಧ್ವಜಕ್ಕೆ ನಮ್ಮ ವಂದನೆಗಳು!

- ನಿರಂಕುಶ ರಾಜಪ್ರಭುತ್ವದ ನಿರ್ನಾಮಕ್ಕಾಗಿ
- — ಜವಾಬ್ದಾರಿ ಸರ್ಕಾರದ ಸಾಧನೆಗಾಗಿ
- — ಸಂಯುಕ್ತ ಕರ್ನಾಟಕ ಪ್ರಾಂತ್ಯ ರಚನೆಗಾಗಿ

ಆಗಸ್ಟ್ ೧೫ನ್ನು ಆಚರಿಸಿ

ಬಾಂಧವರೇ,

ಆಗಸ್ಟ್ ೧೫! ಆ ದಿನ, ಶತಮಾನಗಳ ಕಾಲ ಹಾರಾಡಿದ ಯೂನಿಯನ್ ಜ್ಯಾಕ್ ಪತಾಕೆಯನ್ನು ದೂರತಳ್ಳಿ, ಹಿಂದೀ ರಾಷ್ಟ್ರಧ್ವಜ ಹೆಮ್ಮೆಯಿಂದ ಹಾರಾಡುವುದು. ಬ್ರಿಟಿಷ್ ವೈಸ್‌ರಾಯ್, ಅಂದು ರಾಷ್ಟ್ರನಾಯಕರಿಗೆ ಅಧಿಕಾರ ಒಪ್ಪಿಸುತ್ತಾರೆ. ಇಂದಿನ ತಾತ್ಕಾಲಿಕ ಸರ್ಕಾರ ಮಾಯಾವಾಡು ಹೊಂದಿ, ರಾಜ್ಯಾಂಗ ರಚನಾಸಭೆಗೆ ಜವಾಬ್ದಾರಿಯಾಗಿರುತ್ತದೆ ಆ ದಿನ ಹೊಸ ಹಿಂದುಸ್ಥಾನ ಜನ್ಮವೆತ್ತುವುದು. ಆಗಸ್ಟ್ ೧೫, ಹಿಂದಿ ಜನತೆಯ ಸ್ವಾತಂತ್ರ್ಯ ಹೋರಾಟದಲ್ಲಿ ಚಿರಸ್ಮರ್ಣೀಯವಾದ ದಿನ.

ಈ ಪವಿತ್ರ ದಿನವನ್ನು ವಿಜೃಂಭಣೆಯಿಂದ, ಆನಂದೋತ್ಸಾಹಗಳಿಂದ ಆಚರಿಸಲು, ನಾಡಿನ ಪ್ರಮುಖ ರಾಜಕೀಯ ಸಂಸ್ಥೆ ಕಾಂಗ್ರೆಸ್ ನಿರ್ಧರಿಸಿದೆ ನಾಡಿನ ಆನಂದೋತ್ಸಾಹಗಳಲ್ಲಿ ಕಮ್ಯೂನಿಸ್ಟ್ ಪಾರ್ಟಿ ಪಾಲ್ಗೊಳ್ಳುವುದು.

ಈ ಮಹಾದಿನದಂದು ಹಿಂದೂಸ್ಥಾನದ ಸ್ವಾತಂತ್ರ್ಯ ಸಾಧನೆಗಾಗಿ ಹೋರಾಡಿ, ಬಲಿದಾನಮಾಡಿದ ಅಸಂಖ್ಯಾತ ಹುತಾತ್ಮರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ. ಈ ಮಹದಿನದಂದು ಸಂಸ್ಥಾನೀಪ್ರಜೆಗಳಾದ ನಾವು, ನಿರಂಕುಶ ರಾಜಪ್ರಭುತ್ವದ ನಿರ್ನಾಮಕ್ಕಾಗಿ, ಹೋರಾಡಿ ಬಲಿದಾನಮಾಡಿದ, ಕಾಶ್ಮೀರ, ಹೈದರಾಬಾದು, ತಿರುವಾಂಕೂರು, ಮೈಸೂರು ಮತ್ತಿತರ ಅನೇಕ ಸಂಸ್ಥಾನಗಳ ಅಸಂಖ್ಯಾತ ಹುತಾತ್ಮರನ್ನು ಸ್ಮರಿಸಿ, ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ.

ಯುದ್ಧಾನಂತರ, ಹಿಂದೂಸ್ಥಾನದಲ್ಲಾದ, ನಾವಿಕರ, ಸಿಪಾಯಿಗಳ, ವೈಮಾನಿಕರ ಬಂಡಾಯ, ರಾಯಲ್ ನೌಕಾದಳದ ವಿಪ್ಲವ, ನಾಡಿನಾದ್ಯಂತ ಕಾರ್ಮಿಕರ ಮಹಾ ಮುಷ್ಕರಗಳು, ರೈತರ ಹೋರಾಟಗಳೂ ಬ್ರಿಟಿಷ್ ಸಾಮ್ರಾಜ್ಯ ಶಾಹಿಯನ್ನು ಹಿಂದೂಸ್ಥಾನದಿಂದ ಪಲಾಯನ ಕಿತ್ತು ರಾಷ್ಟ್ರನಾಯಕರಿಗೆ, ಅಧಿಕಾರವನ್ನು ಒಪ್ಪಿಸುವಂತೆ ಮಾಡಿದೆ.

ಆದರೆ ನಮ್ಮ ಪ್ರಯಾಣವಿನ್ನೂ ಮುಗಿದಿಲ್ಲ. ಕುಟಿಲ ಬ್ರಿಟಿಷ್ ಸಾಮ್ರಾಜ್ಯ ಶಾಹಿ ನಾಡಿನಲ್ಲಿ ಜಾತೀಯ ಕಲಹವನ್ನು ವೃದ್ಧಿಗೊಳಿಸಿ, ಪಾಕೀಸ್ತಾನ್, ಹಿಂದೂಸ್ಥಾನ ರಾಷ್ಟ್ರಗಳಲ್ಲಿ ಅಂತರ್ಯುದ್ಧವಾಗಲು ಯೋಜನೆಗಳನ್ನು ರಚಿಸಿ, ಸಂಸ್ಥಾನೀಪ್ರಜೆಗಳ ಸ್ವಾತಂತ್ರ್ಯ ಮರ್ದನಮಾಡಲು, ತನ್ನ ದಾಸರಾಗಿದ್ದ ರಾಜರಿಗೆ, ಅವರ ನಿರಂಕುಶ ಸರ್ಕಾರಗಳಿಗೆ, ತಾನು ಬೇರೊಂದು ರೂಪದಲ್ಲಿ ಹಿಂದೂಸ್ಥಾನದ ಸಂಪತ್ತನ್ನು ಸುಲಿಗೆ ಮಾಡಲು ಜನತಾದ್ರೋಹಿಗಳಾದ ಬಂಡವಾಳಗಾರರೊಂದಿಗೆ, ಒಳಸಂಚು ನಡೆಸಿ, ತನ್ನ ಆರ್ಥಿಕ ಪ್ರಭಾವವನ್ನು ಬೀರಲು ಪ್ರಯತ್ನಿಸುತ್ತಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ಬೇರೊಂದು ರೂಪದಲ್ಲಿ ನಮ್ಮ ನಾಡನ್ನು ಆಳಲು ಹವಣಿಸುತ್ತಿದೆ. ಈ ಪವಿತ್ರ ದಿನದಲ್ಲಿ ಬ್ರಿಟಿಷ್ ಕುಟಿಲ ನೀತಿಯನ್ನು ಬಯಲಿಗೆಳೆದು, ಸಾಮ್ರಾಜ್ಯ ಶಾಹಿಯ ಯೋಜನೆಯನ್ನು ನುಚ್ಚು ನೂರು ಮಾಡುವ ಪಣ ತೊಡೋಣ.

ಸಂಸ್ಥಾನೀ ಪ್ರಜೆಗಳಾದ ನಾವು ಈ ಮಹಾದಿನವನ್ನು ಆನಂದೋತ್ಸಾಹಗಳಿಂದ ಆಚರಿಸುವುದಲ್ಲದೆ, ನಮ್ಮ ದುಃಸ್ಥಿತಿಯನ್ನೂ ನೆನೆಯಬೇಕಾಗಿದೆ. ನಮ್ಮ ನೆರೆನಾಡಿನ ಬಾಂಧವರು ಸ್ವತಂತ್ರರಾಗಿರುವುದನ್ನು ಕಂಡು ನಮಗೆ ಆನಂದವಾಗಿದೆ. ಆದರೆ ನಿರಂಕುಶ ರಾಜಪ್ರಭುತ್ವದ ದಬ್ಬಾಳಿಕೆಗೆ ಸಿಕ್ಕಿ, ನಮ್ಮ ಸರ್ವನಾಶವಾಗಿದೆ. ದಾರುಣ ಬಡತನ

P. T. O.

ನವ್ಯನ್ನು ಕಿತ್ತು ತಿನ್ನುತ್ತಿದೆ. ಭಯಂಕರ ಕಾಯಿಲೆಗಳು ನವ್ಯನ್ನು ಕಿತ್ತು ತಿನ್ನುತ್ತವೆ. ನಿರುದ್ಯೋಗ ತಾಂಡವಾಡುತ್ತಿದೆ. ಈ ಕ್ರೂರ ನಿರಂಕುಶ ರಾಜಪ್ರಭುತ್ವದ ಪಾಶದಿಂದ ನಾವಿನ್ನೂ ಸ್ವತಂತ್ರರಾಗಬೇಕಾಗಿದೆ.

ಸಂಸ್ಥಾನದಲ್ಲಿ ಕಾರ್ಮಿಕ ಸಂಘಟನೆಯ ಹಕ್ಕುಬಾಧ್ಯತೆಗಳು ನಿರಾಕರಿಸಲ್ಪಟ್ಟಿದೆ. ಶ್ರೀ ಕೆ. ಹನುಮಂತಯ್ಯನವರು ಕಾರಾಗಾರವಲ್ಲಿ ಬಂಧಿತರಾಗಿದ್ದಾರೆ. ಅನೇಕ ಕಾರ್ಮಿಕ ಮುಖಂಡರನ್ನು ಗಡೀಪಾರು ಮಾಡಲಾಗಿದೆ. ಕೋಲಾರದ ಚಿನ್ನದ ಗಣಿ ಕೆಲಸಗಾರರ ಮೇಲೆ ಗುಂಡುಹಾರಿಸಿ ಕೊಲೆಮಾಡಿದೆ. ಕೆಲಸಗಾರರಲ್ಲಿ ಭಯಭೀತಿಗಳನ್ನು ಹುಟ್ಟಿಸಿ ಐಕ್ಯತೆಯನ್ನು ಮುರಿಯಲು ಸರ್ಕಾರ ಪ್ರಯತ್ನಿಸುತ್ತಿದೆ. ಲೇಬರ್ ಕಮೀಶನರ ಪ್ರತಿಗಾಮಿ ಸರ್ಕ್ಯೂಲರ್, ಕಾರ್ಮಿಕ ಸಂಘಗಳ ಸಂಘಟಿತ ಚಳುವಳಿಯನ್ನು ಮುರಿಯಲು ಪ್ರಯತ್ನಿಸಿದೆ.

ಇಷ್ಟೆಲ್ಲಾ ಆಲ್ಲದೆ, ದುರಭಿಮಾನ ಸರ್ಕಾರ ನಾಡಿನಲ್ಲಿ ಕೋಮುವಾರು ವ್ಯಾಧಿಯನ್ನು ಹರಡಲು ಪ್ರಯತ್ನಿಸುತ್ತಿದೆ. ವಿದ್ಯಾರ್ಥಿಗಳಲ್ಲಿ ಕೋಮುವಾರು ವಿಷಬೀಜವನ್ನು ಬಿತ್ತಿ ಐಕ್ಯತೆಯನ್ನು ಮುರಿಯಲು ಯುಕ್ತಿ ಹೂಡಲಾಗಿದೆ. ರಾಜ್ಯಾಂಗ ರಚನಾ ಸಭೆಯಲ್ಲಿ ದಿವಾನರು ಸರ್ವಾಧಿಕಾರ ವಹಿಸಿ, ಜನತೆಯ ಆಶೋತ್ತರಗಳನ್ನು ತಡೆಗಟ್ಟಲು, ಇಷ್ಟೆಲ್ಲಾ ಕುತಂತ್ರಗಳನ್ನು ರಚಿಸಲಾಗಿದೆ. ನಾಡಿನಲ್ಲಿ ಅನ್ನಕ್ಷಾಮ, ಬಟ್ಟೆಯ ಬರ ತಾಂಡವವಾಡುತ್ತಿರುವಾಗ, ಬೇಜವಾಬ್ದಾರಿ ಸರ್ಕಾರ ಜನತೆಯ ಹಿತರಕ್ಷಣೆ ಮಾಡದೆ ದಬ್ಬಾಳಿಕೆಯ ರಾಜ್ಯಭಾರ ನಡೆಸುತ್ತಿದೆ.

ಈ ಮಹಾದುರಂತವನ್ನು ತಪ್ಪಿಸಬೇಕಾದರೆ, ಒಂದೇ ದಾರಿ, ಜನತೆ ಭೇದಭಾವನೆಗಳನ್ನು ಮರೆತು ಜವಾಬ್ದಾರಿ ಸರ್ಕಾರಕ್ಕಾಗಿ, ಹೋರಾಡಬೇಕು, ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ಹೂಡಲು ಕರೆಯಿತ್ತಿದೆ. ಜನತೆ, ಪಕ್ಷ ಭೇದಗಳನ್ನು ಮರತು ಕಾಂಗ್ರೆಸಿನೊಂದಿಗೆ ಕಲೆತು ಹೋರಾಡಬೇಕು.

ಆಗಸ್ಟ್ ೧೫, ಜವಾಬ್ದಾರಿ ಸರ್ಕಾರ ಸಾಧನೆಗಾಗಿ ಸಂಯುಕ್ತ ಕರ್ನಾಟಕ ರಚನೆಗಾಗಿ, ನಿರಂಕುಶ ರಾಜಪ್ರಭುತ್ವದ ನಿರ್ನಾಮಕ್ಕಾಗಿ, ಅಂತಿಮ ಸಂಗ್ರಾಮದ ಕ್ರಾಂತಿ ಕಹಳೆ ಕೂಗಲಿ, ಕಮ್ಯುನಿಸ್ಟ್ ಪಕ್ಷ, ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ಕಾಂಗ್ರೆಸಿನೊಂದಿಗೆ ಭುಜಕ್ಕೆ ಭುಜಕೊಟ್ಟು ಹೋರಾಡುವುದು.

ಈ ಮಹಾದಿನವನ್ನು, ವೀರಘೋಷಣೆಗಳಿಂದ, ಆನಂದೋತ್ಸಾಹಗಳಿಂದ ಆಚರಿಸಿ, ಮನೆ ಮನೆಗಳ ಮೇಲೆ, ರಾಷ್ಟ್ರಧ್ವಜವನ್ನು ಹಾರಿಸಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸಭೆಗಳಲ್ಲಿ, ಮೆರವಣಿಗೆಗಳಲ್ಲಿ ಭಾಗವಹಿಸಬೇಕೆಂದು, ಬೆಂಗಳೂರಿನ ಜನತೆಗೆ ಕಮ್ಯೂನಿಸ್ಟ್ ಪಾರ್ಟಿ ಕರೆಯೀಯುತ್ತದೆ.

* ಶ್ರೀ ಕೆ. ಹನುಮಂತಯ್ಯನವರ, ಈಸೂರು, ಶ್ರವಣಬೆಳಗೂಳ, ಮತ್ತು ಕೋಲಾರದ ಚಿನ್ನದಗಣಿ ಕಾರ್ಮಿಕರ ಬಿಡುಗಡೆಯಾಗಬೇಕು.
* ಗಡೀಪಾರು ಆಜ್ಞೆಗಳು ಕೂಡಲೇ ರದ್ದಾಗಬೇಕು.
* ವಿದ್ಯಾರ್ಥಿಗಳ ಮೇಲಿರುವ ಪ್ರತಿಬಂಧಕಾಜ್ಞೆಗಳು ರದ್ದಾಗಬೇಕು.
* ಕಾರ್ಮಿಕರಿಗೆ ಜೀವನಾಧಾರವೇತನ ಕೊಟ್ಟು ಸರ್ಕಾರಿ ನೌಕರರಿಗೆ ಮತ್ತು ಉಪಾಧ್ಯಾಯರಿಗೆ ಕೇಂದ್ರ ಪೇ ಕಮೀಷನ್ನಿನ ಶಿಫಾರ್ಸುಗಳನ್ನು ಆಚರಣೆಗೆ ತರಬೇಕು.
* ಕಳ್ಳಸಂತೆಯನ್ನು ನಿರ್ಮೂಲಮಾಡಿ, ಜನತೆಗೆ ಅನ್ನಬಟ್ಟೆ ಸಿಕ್ಕುವಂತಾಗಬೇಕು.
* ಕಾರ್ಮಿಕರಿಗೆ ಹಕ್ಕುಬಾಧ್ಯತೆಗಳು ದೊರೆಯಬೇಕು.
* ಜವಾಬ್ದಾರಿ ಸರ್ಕಾರಕ್ಕಾಗಿ ಅಂತಿಮ ಹೋರಾಟ ಹೂಡಿ!

ಎನ್: ಸಿ. ರಣನವರೆ
ಕಾರ್ಯದರ್ಶಿ, ಬೆಂಗಳೂರು ಸಮಿತಿ.
ಕಮ್ಯೂನಿಸ್ಟ್ ಪಾರ್ಟಿ.

ಚಂಪಾ ಅಂಡ್ ಕೋ., ಬೆಂಗಳೂರು ನಗರ

I.C. No. 53/47-48.
Confidential.

MR. L. MUNISWAMY, B.A.
DEPUTY COMMISSIONER.

Date 16/8/1947.

Hassan.

Dear Sir,

I am herein enclosing a copy of letter received from the District Superintendent of Police, Hassan re; the celebrat ions of Independence Day on the 15rth instant in this District for favour of information.

Yours Sincerely,

L. Muniswamy

V.Vedavyasacharya, Esq., B.A.,
Chief Secretary to Govt.,
Bangalore.

39
CB
UO
18/8
18/8
16/8/47

Copy of letter no. S.B.13/47-48 dated 15th August 1947 from the District Superintendent of Police, Hassan to the Deputy Commissioner, Hassan District.

Subject:- Celebration of Independence Day in the District.

I have the honour to state that the Public of Hassan Town celebrated Independence Day on 15/8/47 in a grand and elaborate scale. As a part of the function, special prayers had been arranged in the temples, churches and other places of worship by the Public and the Municipality. The merchant class especially the Hindus evinced a keen and lively interest in decorating their business premises with buntingd and mango and plantain leaves and lights. National flags had been hoisted on all Hindu shops and other business centres.

In the morning the students of Vokkaligara Hostel and other students of Hassan town numbering about 50 took out Prabhat Pheris in the main streets of Hassan ~~xxx~~ town shouting the usual slogans and singing national songs and there after they assembled in the Premises of Vokkaligara Hostel and Messrs. Krishnappa and Javare Gowda, student congressites, hoisted the Mysore and National flags respectively. Similarly, the labourers of the Mysore Implements Factory, Hassan, and about 50 persons of Chik Garadi, Hassan had also arranged Prabhat Pheris in the morning.

Flag hoisting ceremony was the next main feature of the Independence Day celebrations. It had been arranged by the authorities of the Hassan Town Municipality, the District Board and the Scout Head Quarters. At the Maharaja park where the Mysore and the National flags were hoisted by the auspices of the Town Municipality, Mr. A.G. Ramachandra Rao, General Secretary of the Mysore State Congress spoke on the significance of the 3 colours and the implications of the Asoka wheel as also of the Mysore flag. At the other function also both the Dominion ~~xxxx~~ and Mysore flags were hoisted.

At the Scout head quarters, Mr. S.V. Pattabhi, Advocate, read out to the Scouts the message that had been received from the Chief Scout of India, Sir Rej Bahadur Sapru, and Rajasevasakta Mr.S. Venkateshaiya, District Scout Commissioner addressed the Scouts on the significance and importance of the Independence Day and advised them to follow the tenets of Scouting and render service in the cause of the Country. At the flag hoisting ceremony of the District Board Office, the President of the Board also spoke on the significance of the ~~Indendence~~ Independence Day celebrations. After this, the flag hoisting ceremony at the Vegetable Market Square by the shop Keepers took place. Mr A.S.Mallappa and Parthasarathi Iyengar spoke on the occasion. At all these places, the function concluded with the singing of the Mysore National Anthem.

By this time it was nearly 10-30 a.m. and a huge gathering of about 5000 people consisting of the labouerers of the Implements Factory, the local Educational Institutions, the merchants and the leading Public men of Hassan town had assembled at the Municipal Office to take out the procession of Bhafat mata, national leaders and His Highness. The photos of the Bharat mata and Mahatma Gandhi and other national leaders and His Highness had been installed in a gaily decorated chariot in the premises of the Municipal Office. The labourers of the Implements Factory had similarly installed the photos of Bharat Mata, Mahatma Gandhi and other national leaders and His Highness in a decorated-cart drawn by 4 pairs of Bullocks. The processionalists there after went through the main streets of the Town shouting slogans and singing national songs and finally at about 12 noon, they returned to the Municipal Office where the crowd dispersed after singing of the Mysore National Anthem. The Municipal authorities had arranged for the distribution of the sweets in all the Educational institutions. Necessary ~~xxx~~Police arrangements had been made and the function passed off ~~xxx~~ peacefully.

It may be stated here that a few Muslims participated in the procession. A few of the Muslims ~~xxxx participated~~ had also hoisted the Dominion and ~~the~~ League flags over their residences.

In the evening, a public meeting had been arranged in the Maharaja Park at 6-30 p.m. under the Presidentship of Rao Bahadur

Gurubhakta Thilaka N.S.Nanjundaiah. After the singing of Vande Mathe ram and lavani recitals Messrs Rajasevasakta S.Venkateshaiya, Sesha, and Mr. Nanjundaiah addressed the gathering of about 50 people on the significance of the Independence Day celebrations and also made a refe erence to the History of the Freedom struggle carried on ~~the~~ by the - Indian National Congress. Mr. Nanjundaiah in his speech expressed h his regret that Mysore was not represented in the Dominion Cabinet. Mr. Karle Thimmappa Gowda next read out the Independence Day pledge se sent by the President of the Indian National Congress. With a vote of of thanks proposed by Mr. H.D.Bramhadevaiah, President of the Town - Municipality the functions came to a close at 7-15 p.m. after the sing ing of National Anthem of Mysore. There were also display of Fire works at the end of the meeting.

Information is received from the taluks that the 'Day' was celebrated in all the taluks and the same passed off peacefully.

sd/- S.C. Mallappa.

'Copy'

Deputy Commissioner,
Hassan District.

16/8/47

CONFIDENTIAL.

No.CC.1-38/47-48 Office of the Superintendent of Police,
Bangalore City, 14th Aug. 47.

From

C.CHANDY,Esq.,M.A.,B.L.,
Superintendent of Police,
Bangalore City.

To

A.C.NIRVANI GOWDA,Esq.,B.A.,
Deputy Commissioner,
Bangalore District,
Bangalore.

Sir,

LABOUR

16/8/47

Mysore State Railway Employee's Association.

I have the honour to state that it is reported that all the workers of the Loco Department are reported to have applied for leave on the 15th instant as also on 16th through the D.L.O. last evening. The workers in Carriage Department including Guards, Station Masters, Godd-Shed Staff, Shunting Staff and D.T.S. Office Staff are also reported to have sent Leave applications jointly through the D.T.S. to the General Manager to grant them leave on 15th and 16th instants.

It appears they say that "the employees of the Mysore State Railway have arranged to celebrate INDEPENDENCE DAY on the 15th August 1947 in the fittest manner possible. This is mostly in view of the lapsing of the paramountcy of the British Crown, exercised so long over the States. This momentus day will not re-occur at any time and it becomes essential that the function has to be celebrated on the 15th only.

Now that the Government of Mysore have also declared holidays on the 15th and 16th instants and in view of the fact that the Dewan of Mysore has stated to the Representatives of our Association in the interview on the 12th instant that Railway is not an Essential Service and that it can be closed down even for months, if necessary, both the days i.e., 15th and 16th August 1947 may be declared as holidays for all the workers alike so that we may celebrate this unique and happy day."

xx xx xx

As regards the meeting called for at the Railway Institute tomorrow it is understood that the occasion will be primarily to celebrate the INDEPENDENCE DAY and to ~~send~~ submit a Memorandum to His Highness the Maharaja of Mysore expressing ~~in~~ their joy and happyness for getting back Soverign powers and also for getting back the Civil and Military area of Bangalore.

xx xx xx

Somehow, more unity and agreement over the common question of Strike seem to be at present visible in the ranks of the employees. This is obviously on account of the realisation of the vital position occupied by the Railways

in the life of the country of which the employees are conscious and ~~wnk~~ utilise the possible anxiety on the part of the authorities to their own benefit and also on account of the several strikes observed by the employees of other Railways in India mostly under the guidance of the Communists. So far the State Railway Employees are guided by the Communists.

Mysore Mills:

A meeting was held last evening at about 4 P.M. in front of the Mills under the Presidentship of Mr.M.C. Narasimhan, an externee of K.G.F. About 150 labourers had gathered. Communists A.N.Singh, Rananavare and Mari Doss with a Red Flag and the new Dominion Flag were present. The Chairman of the Meeting stated at the outset that they have gathered there to celebrate the INDEPENDENCE DAY, a unique occasion in the history of the Country.

A.N.Singh speaking in Tamil stated that in Civil and Military Station, the public are hoisting the new Dominion Flag in their houses and business places. Formerly the authorities gave a lot of trouble and harassment to them and now the Englishmen are eager to go-in for the same Flag which they treated with contempt previously. The Proprietor of the Cigeratte Factory is an European. He has given two days leave with pay and extra bonus of one month and 14 days pay to the workers. He was proud of Union Jock which he was hoisting on the Factory Building in the past. Now he feels proud to hoist the new Dominion Flag. They got independence not on account of the Maharajas or the money-bags but through their own service and sacrifice and spilling of blood at the alter of Bharatmata. The Maharajas are now joining the Indian Union and try to appear as Deshabakthas. He then referred to the resolution passed by the A.M.C.C. praying for the releases of political prisoners and stated that Mr.K.Hanumanthiah who is jailed for 18 months for a simple speech is made to rot along with murderer and thieves etc. He pleaded for the observance of August 15th in a fitting manner.

Mari Doss another communist speaking next corroborated the speedh of A.N.Singh and stated that they have not yet got full Indpendence in the real sense. In the State of Mysore they have no Responsible Government. They Mysore Congress will start Satyagraha and it is their duty to support the Congress in their struggle.

The Chairman, in his closing speech stated that though the Government have removed the Prohibitory Orders the C.I.Ds. are still taking notes of the proceedings. In due course these C.I.Ds. will have to stop taking notes of their meetings. He wanted that the Mysore Congress to start Satyagraha immediately. He then read the demands referred to earlier in one of their handbills distributed in connection with the celebration of the Indpendence Day. He stated that at the Pit Colony, Malleswaram, the Indipendence Day would be observed on the 15th. The Dominion Flag would be hoisted in the morning. There will also be a meeting. They should co-operate with the procession and the meeting arranged by the Congress.

Rananavare distributed Flags to all the gathering.

Resolutions were passed for the release of Mr.K.Hanumanthiah, Cancellation of Extermment Orders on K.G.F.Workers, co-operation tothe State Congress in their Satyagraha etc.

Binny Mill Association:

A meeting was held opposite to the Mill Gates last evening at 4 P.M. yesterday under the Presidentship of Mr.K.B. Srinivasan, About 1000 labourers had gathered.

Mr.Srinivasan in the course of his speech referred to the Independence of India and stated that only when people from the ranks of labourers and ryots are selected to the Ministry, they can realise the hardships of the common man and do justice to him. It is their right to enjoy the same luxury and happiness so far enjoyed by the monied people. The Management have granted two days holidays on the 15th and 16th and 15 days pay as Bonus to the Labourers in connection with the Independence Day celebrations.

